# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಜನವರಿ 10, 2022

ಸಂಪುಟ : 48 ಸಂಚಿಕೆ : 240 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಸಂಗಮದಲ್ಲಿ ಮೊಳಗಿದ 'ಮೇಕೆದಾಟು ಕೂಗು'




## ಸಾವಿರಾರು ಜನರೊಂದಿಗೆ ಕಾಂಗ್ರೆಸ್ ಪಾದಯಾತ್ರೆ

ರಾಮನಗರ, ಜ. 9 – ಕಾವೇರಿ ನದಿಗೆ ಅಡ್ಡವಾಗಿ ಮೇಕೆದಾಟು ಸಮಾನಾಂತರ ಜಲಾಶಯ ನಿರ್ಮಿಸುವಂತೆ ಒತ್ತಾಯಿಸಿ, ಕಾಂಗ್ರೆಸ್ ಹತ್ತು ದಿನಗಳ ಪಾದಯಾತ್ರೆಯನ್ನು ಕನಕಪುರದ ಸಂಗಮದಿಂದ ಆರಂಭಿಸಿದೆ.

ಕೊರೊನಾ ಮಾರ್ಗಸೂಚಿಗಳನ್ನು ಲೆಕ್ಕಿಸದ ಕಾಂಗ್ರೆಸ್ ನಾಯಕರು, ಬೃಹತ್ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ. ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಪಾದಯಾತ್ರೆಗೆ ಚಾಲನೆ ನೀಡಿದ್ದಾರೆ. ಕಾವೇರಿ ಹಾಗೂ ಅರ್ಕಾವತಿ ನದಿಗಳು ಸೇರುವ ಕನಕಪುರದ ಸಂಗಮದಲ್ಲಿ ಸಮಾವೇಶದ ಮೂಲಕ ಪಾದಯಾತ್ರೆಗೆ ಚಾಲನೆ ನೀಡಲಾಗಿದೆ. 120 ಕಿ.ಮೀ. ಪಾದಯಾತ್ರೆ ಜ.19ರಂದು ಬೆಂಗಳೂರಿಗೆ ತಲುಪಲಿದೆ.

ಕೊರೊನಾ ಮಾರ್ಗಸೂಚಿ ಹಾಗೂ ನಿಷೇಧಾಜ್ಞೆ ಉಲ್ಲಂಘಿಸಿದರೆ ಕ್ರಮ ತೆಗೆದುಕೊಳ್ಳುವುದಾಗಿ ಸರ್ಕಾರ ಹೇಳಿರುವುದಕ್ಕೆ ಕ್ಯಾರೇ ಎನ್ನದೇ ನೂರಾರು ಕಾರ್ಯಕರ್ತರು,ಮುಖಂಡರು ಹಾಗೂ ಸಾಂಸ್ಕೃತಿಕ ಕಲಾ ತಂಡಗಳು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ. ಹಲವಾರು ಧರ್ಮಗುರುಗಳೂ ಸಹ ಪಾದಯಾತ್ರೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜನವರಿ 19 ರ ವರೆಗೆ ವಾರಾಂತ್ಯದ ಕರ್ಫ್ಯೂ ವಿಧಿಸಿದೆ. ರಾತ್ರಿ ಕರ್ಫ್ಯೂ ಪ್ರತಿನಿತ್ಯ ಇದೆ. ಇದರ ಜೊತೆಗೆ ಎಲ್ಲ ಸಮಾವೇಶಗಳು, ಧರಣಿ, ಪ್ರತಿಭಟನೆಗಳ ಮೇಲೂ ನಿಷೇಧ ಹೇರಲಾಗಿದೆ. ಪಾದಯಾತ್ರೆ ವೇಳೆ ಕೊರೊನಾದ ಎಲ್ಲಾ ಶಿಷ್ಟಾಚಾರಗಳನ್ನು ಪಾಲಿಸಲಾಗುವುದು ಎಂದು ಕಾಂಗ್ರೆಸ್ ತಿಳಿಸಿತ್ತು.

ಚಿತ್ರನಟರಾದ ದುನಿಯಾ ವಿಜಯ್ ಹಾಗೂ ಸಂಗೀತ ನಿರ್ದೇಶಕ ಸಾಧು ಕೋಕಿಲ ಸೇರಿದಂತೆ, ಹಲವರು ಪಾದಯಾತ್ರೆಯಲ್ಲಿ ಭಾಗಿಯಾಗಿದ್ದರು.

ಪಾದಯಾತ್ರೆ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, ಬಿಜೆಪಿ ಸರ್ಕಾರ ಮೇಕೆದಾಟು ಯೋಜನೆಗೆ ಪರಿಸರ ಅನುಮತಿ ಪಡೆಯುವಲ್ಲಿ ವಿಳಂಬ ದ್ರೋಹ ಮಾಡುತ್ತಿದೆ ಎಂದು ಆರೋಪಿಸಿದರು.

ಮೇಕೆದಾಟು ಯೋಜನೆಯಿಂದ ಬೆಂಗಳೂರು ಹಾಗೂ ಸುತ್ತಲಿನ ಪ್ರದೇಶಗಳ ಜನರಿಗೆ ಕುಡಿಯುವ ನೀರು ಸಿಗುತ್ತದೆ. ಇದರಿಂದ ಯಾವುದೇ ರಾಜ್ಯಕ್ಕೆ ಅನ್ಯಾಯವಾಗುವುದಿಲ್ಲ. ಯೋಜನೆ ಜಾರಿಗಾಗಿ ನ್ಯಾಯಾಲಯ, ಟ್ರಿಬ್ಯೂನಲ್ ಇಲ್ಲವೇ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದಿಂದ ತಡೆಯಾಜ್ಞೆ ಇಲ್ಲ. ಇಷ್ಟಾದರೂ ಸರ್ಕಾರ ಯೋಜನೆ ಜಾರಿಗೆ ತರುತ್ತಿಲ್ಲ ಎಂದವರು ಆಕ್ಷೇಪಿಸಿದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಆಗಿದೆ. ಆದರೂ ಪರಿಸರ ಅನುಮತಿ ಪಡೆದಿಲ್ಲ. ತಮಿಳುನಾಡಿನಲ್ಲಿ ಬಿಜೆಪಿ ತನ್ನ ಶಕ್ತಿ (3ನೇ ಪುಟಕ್ಕೆ)

## ಗರ್ಭಿಣಿ, ದಿವ್ಯಾಂಗರಾಗಿರುವ ಕೇಂದ್ರ ನೌಕರರಿಗೆ ಹಾಜರಿ ವಿನಾಯಿತಿ

ನವದೆಹಲಿ, ಜ. 9 – ಗರ್ಭಿಣಿಯಾಗಿರುವ ಹಾಗೂ ದಿವ್ಯಾಂಗರಾಗಿರುವ ಕೇಂದ್ರ ಸರ್ಕಾರಿ ನೌಕರರು ಕಚೇರಿಗೆ ಬರುವುದರಿಂದ ವಿನಾಯಿತಿ ನೀಡಲಾಗಿದೆ. ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ, ಅವರು ಮನೆಯಿಂದ ಕೆಲಸ ಮಾಡಲು ಸಿದ್ಧವಾಗಿರಬೇಕಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಶೇ.50ರಷ್ಟು ಸರ್ಕಾರಿ ನೌಕರರು ಕಚೇರಿಗೆ ಬರಬೇಕು. ಉಳಿದವರು ಮನೆಯಿಂದಲೇ ಕೆಲಸ ಮಾಡಬೇಕು ಎಂದು ಕೇಂದ್ರ ಈ ಹಿಂದೆಯೇ ತಿಳಿಸಿದೆ.

## ನಾಡಿದ್ದು ನೀಟ್ - ಪಿ.ಜಿ. ಕೌನ್ಸೆಲಿಂಗ್

ನವದೆಹಲಿ, ಜ. 9 – ನೀಟ್ - ಪಿ.ಜಿ. ಕೌನ್ಸೆಲಿಂಗ್ ಜನವರಿ 12ರಿಂದ ಆರಂಭವಾಗಲಿದೆ ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ತಿಳಿಸಿದ್ದಾರೆ.

ಶೇ.27ರ ಒ.ಬಿ.ಸಿ. ಹಾಗೂ ಶೇ.10ರ ಆರ್ಥಿಕ ಮೀಲಾತಿಗೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ಅನುಮತಿ ನೀಡಿದ ನಂತರ ಕೌನ್ಸೆಲಿಂಗ್ ಹಾದಿ ತೆರವಾಗಿತ್ತು. ಕಳೆದ ವರ್ಷ ಜನವರಿ ಹಾಗೂ ಏಪ್ರಿಲ್‌ನಲ್ಲಿ ಎರಡು ಬಾರಿ ನೀಟ್ - ಪಿ.ಜಿ. ಪರೀಕ್ಷೆ ಮುಂದೂಡಿ, ಅಂತಿಮವಾಗಿ ಸೆಪ್ಟೆಂಬರ್ 11ರಂದು ಪರೀಕ್ಷೆ ನಡೆಸಲಾಗಿತ್ತು. ಆನಂತರವೂ ಕೌನ್ಸೆಲಿಂಗ್ ತಡವಾಗಿತ್ತು.


### ಒಂದನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಎಂಸಿಸಿ. 'ಎ' ಬ್ಲಾಕ್, 3ನೇ ಮೇನ್ # 2597/1A, ವಾಸಿ

**ದಿ|| ಶ್ರೀಮತಿ ನಿರ್ಮಲಮ್ಮನವರು**

ಅಧ್ಯಕ್ಷರು, ಶ್ರೀ ಲಕ್ಷ್ಮಿನಾರಾಯಣ ಭೋವಿ ವಿದ್ಯಾಸಂಸ್ಥೆ (ರಿ) ಗೊಲ್ಲರಹಳ್ಳಿ

*ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.*

*ಸದಾ ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ*

ಪತಿ : ಜಿ.ಟಿ. ತಿಮ್ಮಪ್ಪ, ಕಾರ್ಯದರ್ಶಿಗಳು ಪುತ್ರ: ಜಿ.ಟಿ. ಹರೀಶ್ ಶ್ರೀಮತಿ ಸಿಂಧು

ಪುತ್ರಿಯರಾದ: ಶ್ರೀಮತಿ ಜಿ.ಟಿ. ಲಕ್ಷ್ಮಿ, ಶ್ರೀಮತಿ ಜಿ.ಟಿ. ಲತಾ,

ಕು|| ಜಿ.ಟಿ. ಸೌಮ್ಯ ಮತ್ತು ಅಳಿಯಂದಿರು, ಮೊಮ್ಮಕ್ಕಳು,

ಗೊಲ್ಲರಹಳ್ಳಿ ಬಂಧು ಮಿತ್ರರು

ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು

ಶ್ರೀ ಆಂಜನೇಯ ಪ್ರೌಢಶಾಲೆ, ಯರಗುಂಟೆ, ಹೊಸ ಬಡಾವಣೆ, ದಾವಣಗೆರೆ.












**ಸೂರ್ಯನತ್ತ ತಿರುಗಿ ನಳನಳಿಸುತ್ತಿರುವ ಸೂರ್ಯಕಾಂತಿ**

ಹೊನ್ನಾಳಿ ತಾಲ್ಲೂಕಿನ ಹನುಮಸಾಗರ ಗ್ರಾಮದ ಜಮೀನೊಂದರಲ್ಲಿ ನಳನಳಿಸುತ್ತಿರುವ ಸೂರ್ಯಕಾಂತಿ ಬೆಳೆ.

# ಭಗವಂತನ ನಾಮಸ್ಮರಣೆಯಿಂದ ಬದುಕು ಸಾರ್ಥಕ

## ಹರಪನಹಳ್ಳಿ ಕಾರ್ಯಕ್ರಮದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನನಾಂದ ಸ್ವಾಮೀಜಿ ಅಭಿಮತ

ಹರಪನಹಳ್ಳಿ, ಜ.9- ಸಂಸಾರ ಗಾಳಿಯಿದ್ದಂತೆ, ದೇಹದಲ್ಲಿನ ಪ್ರಣತಿಯಲ್ಲಿ (ಜೀವ) ದೀಪ ಯಾವಾಗ ಆರುತ್ತೆ ಗೊತ್ತಿಲ್ಲ, ಹುಟ್ಟು ಆಕಸ್ಮಿಕ, ಸಾವು ಖಚಿತ.ಆದ್ದರಿಂದ ಜೀವ ಇರುವಾಗ ಏನಾದರೂ ಸಾಧನೆ ಮಾಡಬೇಕು ಎಂದು ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಶ್ರೀ ಪ್ರಸನ್ನನಾಂದ ಸ್ವಾಮೀಜಿ ಕರೆ ನೀಡಿದರು.

ತಾಲ್ಲೂಕಿನ ಶಾಂತಿನಗರ ಗ್ರಾಮದಲ್ಲಿ ವಕೀಲ ಅನಂತನಾಯ್ಕ ಅವರ ತಂದೆ, ತಾಯಿಯ ಪುಣ್ಯಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಸಾಂಸಾರಿಕ, ವ್ಯವಹಾರಿಕ ಒತ್ತಡದಲ್ಲಿ ಭಗವಂತನ ನಾಮಸ್ಮರಣೆ ಮರೆತಿದ್ದು, ಆತನ ಸ್ಮರಣೆಯಿಂದ ಜೀವನ ಸುಧಾರಿಸಿಕೊಳ್ಳಬೇಕು. ಭಗವಂತನ ನಾಮಸ್ಮರಣೆಯಿಂದ ಬದುಕು ಸಾರ್ಥಕವಾಗುವುದು ಎಂದ ಅವರು, ಪುನೀತ್ ರಾಜಕುಮಾರ್ ಅವರ ಸ್ಮರಣೆ ಮಾಡಿದರು.

ಮನುಷ್ಯ ಚಂದ್ರನ ಮೇಲೆ ಕಾಲಿಟ್ಟಿರುವ ಆದರೆ ಜಗತ್ತಿಗೆ ಕಣ್ಣಿಗೆ ಕಾಣದ ವೈರಸ್‌ನಿಂದ



ಬಹುತೇಕ ಪರೀಕ್ಷೆಯೊಳಗೆ ಬಹಳ ಜನ ಫೇಲಾಗಿದ್ದಾರೆ (ಸಾವು), ಮತ್ತೆ ಭಗವಂತ ಪರೀಕ್ಷೆವೊಡ್ಡಿದ್ದಾನೆ. ಅದು ಮೂರನೇ ಅಲೆಯಾದ ಓಮಿಕ್ರಾನ್ ಬಂದಿದೆ. ಅದಕ್ಕೆ ನಾವು ಪಾಸಾಗಲು ಎಸ್‌ಎಂಎಸ್ ಸೂತ್ರ ಅಳವಡಿಸಿಕೊಂಡಲ್ಲಿ 10 ಪರೀಕ್ಷೆ ಬಂದರೂ ತೊಂದರೆಯಾಗುವುದಿಲ್ಲ ಎಂದರು.

ಮಾದಾರ ಚನ್ನಯ್ಯ ಶ್ರೀಗಳು ಮಾತನಾಡಿ, ನಾವು ಆಂದೋಲನ ಮಾಡಿದ್ದೇವೆ, ಯಾವುದೋ ಕಾರಣಕ್ಕಾಗಿ ಹಿಂದೆ ನಮ್ಮ ಕಸಬುಗಳ ಆಧಾರದಲ್ಲಿ ಜಾತಿ ಸೃಷ್ಟಿಯಾಗಿವೆ, ಆದರೆ ಕಸಬುಗಾಗಿ ಜಾತಿ ಮಾಡಿಕೊಂಡಿದ್ದೇವೆ ಎನ್ನುವುದನ್ನು ಮರೆತು, ಅದರ ಹೆಸರಿನಲ್ಲಿ ಜಾತಿಯನ್ನು ಪ್ರಬಲವಾಗಿ ಇಟ್ಟುಕೊಂಡು ಉಳಿದ ಒಳ್ಳೆತನ ಮರೆತು ನಾವು ಪ್ರತ್ಯೇಕವಾಗಿ ಬದುಕುವ ಸಂದರ್ಭಕ್ಕೆ ಮುಂದಾಗಿರುವುದು ದುರಂತವಾಗಿದೆ ಎಂದರು.

ಶ್ರೀ ಮಡಿವಾಳ ಮಾಚಿದೇವ ಸ್ವಾಮೀಜಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್‌ರವರ ಬದುಕಿನ ದಾರಿಯಲ್ಲಿ ನಡೆಯಬೇಕಿದೆ ಶೈಕ್ಷಣಿಕ ಪ್ರಗತಿಗೆ ಒತ್ತು ನೀಡಿದ್ದು, ಅವರಂತೆ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿ ಎಂದರು.

ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ದುಗ್ಗಾವತಿ ಶ್ರೀ ಮಹೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಯುಪಿಎಸ್‌ಸಿಯಲ್ಲಿ ರ‍್ಯಾಂಕ್ ಪಡೆದ ಲಾವಣ್ಯ ಹಾಗೂ ಅಂಗನವಾಡಿ, ಆಶಾ ಕಾರ್ಯಕರ್ತರಿಗೆ ಮತ್ತು ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಪ್ರಗತಿಪರ ಚಿಂತಕ ಕೋಡಿಹಳ್ಳಿ ಭೀಮಪ್ಪ, ವಕೀಲ ಅನಂತನಾಯ್ಕ, ಸಾಹಿತಿ ಮಲ್ಲಿಕಾರ್ಜುನ ಕಡಕೋಳ, ಟಿಎಪಿಎಂಎಸ್ ಅಧ್ಯಕ್ಷ ಎಲ್.ಬಿ. ಹಾಲೇಶ್‌ನಾಯ್ಕ, ಪ್ರಕಾಶ್‌ನಾಯ್ಕ, ಈಶ್ವರನಾಯ್ಕ, ಲಕ್ಷ್ಮಣ ರಾವತ್, ರುದ್ರೇಶ್‌ನಾಯ್ಕ, ಭಜನಾನಾಯ್ಕ, ಅನಿಲನಾಯ್ಕ, ನಾಗನಾಯ್ಕ, ಬಲವಂತಪ್ಪ ಇತರರು ಉಪಸ್ಥಿತರಿದ್ದರು.

# 28ನೇ ಅಂತರರಾಷ್ಟ್ರೀಯ ವಿಹಾರ ನೌಕೆ ಸಾಂಸ್ಕೃತಿಕ ಸೌರಭದಲ್ಲಿ ನಮನ ಅಕಾಡೆಮಿ



ದಾವಣಗೆರೆ, ಜ.9- ಮಂಗಳೂರಿನ ಅಬ್ಬಕ್ಕ ರಾಣಿ ವಿಹಾರ ನೌಕೆಯಲ್ಲಿ ಮೊನ್ನೆ ನಡೆದ 28ನೇ ಅಂತರರಾಷ್ಟ್ರೀಯ ವಿಹಾರ ನೌಕೆ ಸಾಂಸ್ಕೃತಿಕ ಸೌರಭದಲ್ಲಿ ಪಾಲ್ಗೊಂಡಿದ್ದ ನಗರದ ನಮನ ಅಕಾಡೆಮಿಯು ಲಘು ಶಾಸ್ತ್ರೀಯ ನೃತ್ಯ ಹಾಗೂ ಜನಪದ ನೃತ್ಯವನ್ನು ಪ್ರಸ್ತುತ ಪಡಿಸಿತು.

ಮಂಗಳೂರಿನ ಮಂಜುನಾಥ್ ಎಜುಕೇಶನ್ ಟ್ರಸ್ಟ್, ಎಸ್.ಕೆ.ಮುನಿಸಿಪಲ್ ಎಂಪ್ಲಾಯೀಸ್ ಯೂನಿಯನ್ (ಮಂಗಳೂರು), ಮಹಾನಗರ ಪಾಲಿಕೆ (ಮಂಗಳೂರು) ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಮಂಗಳೂರು) ಇವರ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಸಮುದ್ರದ ಮಧ್ಯದಲ್ಲಿ ವಿಹಾರ ನೌಕೆಯ ಒಳಗೆ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ನಮನ ಅಕಾಡೆಮಿಯೊಂದಿಗೆ ಬೆಂಗಳೂರು, ಮಂಗಳೂರು, ಉಡುಪಿ, ಶಿರಸಿ, ಬೆಹರಿನ್, ಮೈಸೂರು, ಶಿವಮೊಗ್ಗ, ಮುಂಬೈ ಇನ್ನೂ ಮುಂತಾದ ಸ್ಥಳಗಳಿಂದ ಆಗಮಿಸಿದ್ದ ಕಲಾವಿದರು ತಮ್ಮ ಕಲೆಯನ್ನು ಪ್ರಸ್ತುತಪಡಿಸಿದರು.

ನಮನ ಅಕಾಡೆಮಿಯ ನೃತ್ಯ ಕಲಾವಿದರು 'ಕರ್ನಾಟಕ ಬರಿ ನಾಡಲ್ಲ ನಮ್ಮ ಸಂಸ್ಕೃತಿಯ ಧಾತು' ಎಂಬ ಭಾವಗೀತೆಗೆ ಲಘು ಶಾಸ್ತ್ರೀಯ ನೃತ್ಯ ಹಾಗೂ 'ಗಣೇಶ ಸ್ತುತಿಗೆ' ಲೇಝಿಮ್ ಬಳಸಿ ಜನಪದ ನೃತ್ಯ ಪ್ರಸ್ತುತಪಡಿಸಿದರು. ಅಕಾಡೆಮಿಯಲ್ಲಿ ಭರತನಾಟ್ಯಂ ಕಲಿಯುತ್ತಿರುವ 40 ವರ್ಷ ಮೇಲ್ಪಟ್ಟ ಗೃಹಿಣಿಯರು ನೃತ್ಯದಲ್ಲಿ ಭಾಗವಹಿಸಿದ್ದು ವಿಶೇಷ ಆಗಿತ್ತು.

ಗುರು ಶ್ರೀಮತಿ ಡಿ.ಕೆ.ಮಾಧವಿ, ಶ್ರೀಮತಿ ಉಷಾಶ್ರೀ, ಶ್ರೀಮತಿ ಪಿ.ರೇಖಾ, ಶ್ರೀಮತಿ ಕೆ.ಶ್ರೀದೇವಿ, ಎನ್.ಎಸ್.ಜೋಷಿತ, ಸಿ.ವಿ.ಶ್ರೇಯಾ, ಡಿ.ಚಾಣಸ್ಯ, ಜಿ.ಎಂ.ಶ್ರೇಯ, ಎನ್.ಆರ್.ಸಿಂಚನ ನೃತ್ಯಗಳನ್ನು ಪ್ರಸ್ತುತಪಡಿಸಿದರು.

## ರಾಜ್ಯ ಮಟ್ಟದ ವಿಚಾರ ಸಂಕಿರಣ ಪ್ರಬಂಧಗಳಿಗೆ ಆಹ್ವಾನ

ದಾವಣಗೆರೆ, ಜ.9- ಕರ್ನಾಟಕ ಸಾಹಿತ್ಯ ಅಕಾಡೆಮಿಯು ಇದೇ ದಿನಾಂಕ 21 ಮತ್ತು 22 ರಂದು 'ಡಾ. ಸಿದ್ದಲಿಂಗಯ್ಯನವರ ಬದುಕು - ಬರಹ' ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಂಡಿದೆ. ಈ ಸಂಕಿರಣದಲ್ಲಿ ಪರ್ಯಾಯ ಗೋಷ್ಠಿಗಳು ನಡೆಯಲಿವೆ.

ವಿಚಾರ ಸಂಕಿರಣದ ಪರ್ಯಾಯ ಗೋಷ್ಠಿಯಲ್ಲಿ ಡಾ. ಸಿದ್ದಲಿಂಗಯ್ಯನವರ ಬದುಕು - ಬರಹ ಕುರಿತಾಗಿ ಪ್ರಬಂಧ ಮಂಡಿಸುವವರು ಅರ್ಜಿಯೊಂದಿಗೆ ಪ್ರಬಂಧವನ್ನು ಸಲ್ಲಿಸಬೇಕು. ಪ್ರಬಂಧ ಸಲ್ಲಿಸಲು ಇದೇ ದಿನಾಂಕ 12 ಕೊನೆಯ ದಿನವಾಗಿರುತ್ತದೆ. ಅಕಾಡೆಮಿಗೆ ರಿಜಿಸ್ಟರ್ ಅಂಚೆ ಅಥವಾ ಕೋರಿಯರ್ ಮೂಲಕ ನಿಬಂಧನೆಗೊಳಪಟ್ಟು ಅರ್ಜಿಯೊಂದಿಗೆ ಪ್ರಬಂಧಗಳನ್ನು ಸಲ್ಲಿಸಲು ಕೋರಿದೆ. ಹೆಚ್ಚಿನ ವಿವರಗಳಿಗಾಗಿ ಅಕಾಡೆಮಿಯ ವೆಬ್ ಸೈಟ್ ಅನ್ನು http://sahithyaacademy.karnataka.gov.in ಗೆ ಸಂಪರ್ಕಿಸಬಹುದೆಂದು ರಿಜಿಸ್ಟ್ರಾರ್ ಕರಿಯಪ್ಪ ತಿಳಿಸಿದೆ.

## ಭಜನಾ ಸ್ಪರ್ಧೆ ದಿನಾಂಕ ವಿಸ್ತರಣೆ

ದಾವಣಗೆರೆ, ಡಿ.9- ಶ್ರೀ ವೀರೇಶ್ವರ ಪುಣ್ಯಾಶ್ರಮದ ಆಶ್ರಯದಲ್ಲಿ ಬರುವ ಫೆಬ್ರವರಿ 2 ರಿಂದ ಮಾರ್ಚ್ 3ರವರೆಗೆ ಒಂದು ತಿಂಗಳ ಕಾಲ ಹಮ್ಮಿಕೊಳ್ಳಲಾದ ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆಗೆ ಇದೇ ದಿನಾಂಕ 15ರ ವರೆಗೆ ಹೆಸರು ನೋಂದಾಯಿಸುವಂತೆ ಸ್ಪರ್ಧೆಯ ಆಯೋಜಕ ಎ.ಕೊಟ್ರಪ್ಪ ಕಿತ್ತೂರು (9480176601) ತಿಳಿಸಿದ್ದಾರೆ.

# ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡಿ

## ಮಲೇಬೆನ್ನೂರು ಪುರಸಭೆ ಸದಸ್ಯರಿಗೆ ಎಂ. ನಾಗೇಂದ್ರಪ್ಪ ಕಿವಿಮಾತು



ಮಲೇಬೆನ್ನೂರು, ಜ. 9- ಇಲ್ಲಿನ ಪುರಸಭೆಗೆ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ 12 ಜನ ಸದಸ್ಯರನ್ನು ಜಿ.ಪಂ. ಮಾಜಿ ಸದಸ್ಯರಾದ ಎಂ. ನಾಗೇಂದ್ರಪ್ಪ, ಬೆಣ್ಣೆಹಳ್ಳಿ ಹಾಲೇಶಪ್ಪ ಅವರು ಸನ್ಮಾನಿಸಿ, ಅಭಿನಂದಿಸಿದರು.

ಪಟ್ಟಣದ ಬೆಣ್ಣೆಹಳ್ಳಿ ಹಾಲೇಶಪ್ಪ ಅವರ ನಿವಾಸದಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಸರಳ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಎಂ. ನಾಗೇಂದ್ರಪ್ಪ ಅವರು, ಪುರಸಭೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ನೀಡಿದ ಜನರನ್ನು ಅಭಿನಂದಿಸಿದರು.

ನೂತನ ಸದಸ್ಯರು ಸಭೆಗಳಲ್ಲಿ ಶಿಸ್ತಿನಿಂದ ನಡೆದುಕೊಳ್ಳಬೇಕು. ಜನರ ಸಮಸ್ಯೆಗಳಿಗೆ ಧ್ವನಿಯಾಗಿ ಕೆಲಸ ಮಾಡಬೇಕೆಂದು ನಾಗೇಂದ್ರಪ್ಪ ಕಿವಿಮಾತು ಹೇಳಿದರು.

ಬೆಣ್ಣೆಹಳ್ಳಿ ಹಾಲೇಶಪ್ಪ ಮಾತನಾಡಿ, ಶಾಸಕ ಎಸ್. ರಾಮಪ್ಪ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಒಗ್ಗಟ್ಟಾಗಿ ಕೆಲಸ ಮಾಡಿದ್ದರ ಪರಿಣಾಮವಾಗಿ 12 ಸ್ಥಾನ ಗೆದ್ದಿದ್ದೇವೆ ಎಂದರು.

ಮುಖಂಡರಾದ ಪಿ.ಎಸ್. ಹನುಮಂತಪ್ಪ, ಎಂ.ಬಿ. ರೋಷನ್ ಸಾಬ್, ಎಸ್.ಜಿ. ಪರಮೇಶ್ವರಪ್ಪ, ಜಿ. ಮಂಜುನಾಥ್ ಪಟೇಲ್, ಜಿಗಳಿಯ ಜಿ. ಆನಂದಪ್ಪ, ಡಿ.ಹೆಚ್. ಮಂಜುನಾಥ್, ಡಾ. ಬಿ. ಚಂದ್ರಶೇಖರ್, ಎಂ.ಬಿ. ಫೈಜು, ತಳಸದ ಬಸವರಾಜ್, ಎ. ಆರೀಫ್ ಅಲಿ ಮಾತನಾಡಿದರು.

ಪುರಸಭೆಯ ನೂತನ ಸದಸ್ಯರಾದ ಮಹ್ಮದ್ ಖಲೀಲ್, ಸಾಬೀರ್ ಅಲಿ, ಮಹ್ಮದ್ ರಿಯಾಜ್, ಕೆ.ಜಿ. ಲೋಕೇಶ್, ಭೋವಿ ಶಿವು, ದಾದಾಪೀರ್, ಅಬ್ದುಲ್ ಮಜೀದ್ ಮತ್ತು ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಎಂ.ಬಿ. ರುಸ್ತುಂ, ಭೋವಿ ಕುಮಾರ್, ಅನ್ವರ್ ಭಾಷಾ, ಯೂನೂಸ್, ಪಿ.ಹೆಚ್. ಶಿವಕುಮಾರ್, ಬೆಣ್ಣೆಹಳ್ಳಿ ಶಿವಶಂಕರ್, ತಾ. ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಯುವ ಕಾಂಗ್ರೆಸ್ ಅಧ್ಯಕ್ಷ ಜಾಫರ್, ಸೈಫುಲ್ಲಾ ಸಾಬ್, ಚಿಟ್ಟಕ್ಕಿ ನಾಗರಾಜ್, ಭರ್ಮಳ್ಳಿ ಮಂಜು, ಎಳೆಹೊಳೆ ಕುಮಾರ್, ಆದಾಪುರದ ವೀರಭದ್ರಪ್ಪ, ಫಕೃದ್ದೀನ್ ಅಹ್ಮದ್, ಚಂದ್ರಮ್ಮ, ಶೌಕತ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ಹೊಳೆಸಿರಿಗೆರೆ : ಜಾನುವಾರುಗಳಿಗೆ ಕಾಲು ಬಾಯಿ ಜ್ವರ ಲಸಿಕೆ



ಮಲೇಬೆನ್ನೂರು, ಜ. 9- ಹೊಳೆಸಿರಿಗೆರೆ ಗ್ರಾಮದಲ್ಲಿ ಜಾನುವಾರುಗಳಿಗೆ ಪಶುವೈದ್ಯಾಧಿಕಾರಿ ಡಾ. ಬುಡೇನ್ ಸಾಬ್ ಕಾಲು ಬಾಯಿ ಜ್ವರ ಲಸಿಕೆ ನೀಡಿದರು. ರೈತರಾದ ನಾರಾಯಣ, ಕುಂದೂರು ಮಂಜಪ್ಪ ಮತ್ತಿತರರು ಈ ವೇಳೆ ಹಾಜರಿದ್ದರು.

## ಮೃತ ಕೊರೊನಾ ವಾರಿಯರ್ ಆಂಬ್ಯುಲೆನ್ಸ್ ಚಾಲಕನ ಕುಟುಂಬಕ್ಕೆ ದಾನ

ದಾವಣಗೆರೆ, ಜ.9- ತಾಲ್ಲೂಕಿನ ಅತ್ತಿಗೆರೆಯ ಕೊರೊನಾ ವಾರಿಯರ್ 108 ಆಂಬ್ಯುಲೆನ್ಸ್ ಚಾಲಕ ಜಗದೀಶ್ ಅವರ ಅಕಾಲಿಕ ನಿಧನದಿಂದ ಸಂಕಷ್ಟಕ್ಕೊಳಗಾಗಿರುವ ಅವರ ಪತ್ನಿ ಶ್ರೀಮತಿ ಶ್ವೇತಾ ಅವರಿಗೆ ನಗರದ ಎಲ್‌ಐಸಿ ಶಾಖೆ - 2ರ ಮುಖ್ಯ ವಿಮಾ ಸಲಹೆ ಗಾರ ಸಿ.ಸಿ. ಭರತ್ ರಾಜ್ ಅವರು 10 ಸಾವಿರ ರೂ. ಚೆಕ್ ಅನ್ನು ದಾನ ನೀಡಿದರು.



## ಭಾನುವಳ್ಳಿಯಲ್ಲಿ ಇಂದು ಟಗರಿನ ಕಾಳಗ

ಭಾನುವಳ್ಳಿ ಗ್ರಾಮದ ಒಡೆಯ ಬಾಯ್ಸ್ ತಂಡದಿಂದ ರಾಜ್ಯಮಟ್ಟದ ಭಾರೀ ಟಗರಿನ ಕಾಳಗವನ್ನು ಇಂದು ಬೆಳಿಗ್ಗೆ 9 ಗಂಟೆಯಿಂದ ಹಮ್ಮಿಕೊಂಡಿದ್ದು, ಶಾಸಕ ಎಸ್.ರಾಮಪ್ಪ ಚಾಲನೆ ನೀಡಲಿದ್ದಾರೆ.

## ರಾಜನಹಳ್ಳಿಗೆ ಇಂದು ರಥದ ಬಿಡಿ ಭಾಗಗಳ ಆಗಮನ



ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಬರುವ ಫೆಬ್ರವರಿ 8 ಮತ್ತು 9 ರಂದು ಜರುಗುವ ವಾಲ್ಮೀಕಿ ಜಾತ್ರೆಯಲ್ಲಿ ವಾಲ್ಮೀಕಿ ರಥೋತ್ಸವ ನಡೆಸುತ್ತಿದ್ದು, ಈ ವರ್ಷ ನೂತನ ರಥ ಲೋಕಾರ್ಪಣೆಗೊಳ್ಳಲಿದೆ.

ನೂತನ ರಥ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದ್ದು, ರಥದ ಬಿಡಿ ಭಾಗಗಳು ಇಂದು ಸಂಜೆ 5 ಗಂಟೆಗೆ ರಾಜನಹಳ್ಳಿ ಮಠಕ್ಕೆ ಆಗಮಿಸಲಿವೆ. ಈ ವೇಳೆ ಭಕ್ತರು ಹಾಜರಿದ್ದು, ಸ್ವಾಗತಿಸಿಕೊಳ್ಳಬೇಕೆಂದು ಮಠದ ಆಡಳಿತಾಧಿಕಾರಿ ಟಿ.ಓಬಳಪ್ಪ ತಿಳಿಸಿದ್ದಾರೆ.

## ಕುಸ್ತಿ : ಎ.ಆರ್.ಜಿ. ಕಾಲೇಜು ಪ್ರಥಮ



ದಾವಣಗೆರೆ,ಜ.9- ಇದೇ ದಿನಾಂಕ 4ರಂದು ನಡೆದ ದಾವಣಗೆರೆ ವಿಶ್ವವಿದ್ಯಾನಿಲಯ ಮಟ್ಟದ ಅಂತರ್ ಕಾಲೇಜು ಕುಸ್ತಿ ಪಂದ್ಯಾವಳಿಯಲ್ಲಿ ಎ. ಆರ್.ಜಿ ಕಾಲೇಜಿನ ತೃತೀಯ ಬಿ.ಎ ವಿದ್ಯಾರ್ಥಿ ಉಮೇಶ್ ಬಿ. ಜಾಮ್‌ದಾರ್ ಪ್ರಥಮ ಸ್ಥಾನ ಪಡೆದಿದ್ದಾರೆ. ಉಮೇಶ್ ಅವರನ್ನು ಪ್ರಾಚಾರ್ಯ ಕೆ.ಎಸ್. ಬಸವರಾಜಪ್ಪ, ಕ್ರೀಡಾ ಸಂಚಾಲಕ ರಮೇಶ ಪೂಜಾರ, ದೈಹಿಕ ಶಿಕ್ಷಣ ನಿರ್ದೇಶಕ ಕೆ. ಓ. ಪ್ರವೀಣ್ ಅಭಿನಂದಿಸಿದ್ದಾರೆ.

## ಹರಿಹರದಲ್ಲಿ ಪೌಷ್ಠಿಕ ಆಹಾರ ಮೇಳ



ಹರಿಹರ, ಜ. 9- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹರಿಹರ ತಾಲ್ಲೂಕಿನ ಪ್ರಗತಿ ಜ್ಞಾನವಿಕಾಸ ಕೇಂದ್ರ ಷಂಶೀಪುರ ಇವರ ವತಿಯಿಂದ ಈಚೆಗೆ ಪೌಷ್ಠಿಕ ಆಹಾರ ಮೇಳ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಉಪನ್ಯಾಸಕರಾದ ಶ್ವೇತಾ ಈಶ್ವರ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮನೆಯಲ್ಲಿ ಸಾತ್ವಿಕ ಆಹಾರದೊಂದಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ನೀಡಿದರೆ ಮಕ್ಕಳು ಭವಿಷ್ಯಕ್ಕೆ ಆಸ್ತಿಯಾಗುತ್ತಾರೆ ಎಂದರು. ಅಲ್ಲದೇ ಮನೆಯಲ್ಲಿಯೇ ಮಹಿಳೆಯರು ತಯಾರಿಸಬಹುದಾದ ಹತ್ತಾರು ಪೌಷ್ಠಿಕ ಆಹಾರಗಳ ಬಗ್ಗೆ ಮಾಹಿತಿ ನೀಡಿದರು.

ತಾಲ್ಲೂಕು ಯೋಜನಾಧಿಕಾರಿ ಗಣಪತಿ ಮಾಳಂಜಿ, ಮಾತೃಶ್ರೀ ಹೇಮಾವತಿ ಅಮ್ಮ, ಬನ್ನಿಕೊಡು ಗ್ರಾಮ ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿ ಶ್ರೀಧರ್ ಮಾತನಾಡಿದರು.

ಗ್ರಾ.ಪಂ. ಸದಸ್ಯ ರೇವಣಸಿದ್ದಪ್ಪ, ಗ್ರಾಮದ ಹಿರಿಯರಾದ ವಿರೂಪಾಕ್ಷಪ್ಪ, ಜ್ಞಾನವಿಕಾಸ ಸಮನ್ವಯಾಧಿಕಾರಿ ನಂದಿನಿ, ಸೇವಾಪ್ರತಿನಿಧಿ ನೀಲಮ್ಮ ಹಾಗೂ ಸಿದ್ದೇಶ್ವರ, ವೆಂಕಟೇಶ್ವರ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜ್ಞಾನವಿಕಾಸ ಕೇಂದ್ರದ ಸದಸ್ಯರಾದ ಪಾರ್ವತಮ್ಮ ನಿರೂಪಿಸಿದರು. ಚಂದ್ರಮ್ಮ ಸ್ವಾಗತಿಸಿದರು. ಮೇಲ್ವಿಚಾರಕ ಸಂತೋಷ್ ಕೆ ವಂದಿಸಿದರು.

## ಜಿ.ಟಿ. ಕಟ್ಟೆ ಗ್ರಾಮದ ಶ್ರೀಮತಿ ಬೆನಕಮ್ಮ ನಿಧನ



ಹರಿಹರ ತಾ. ಜಿ.ಟಿ. ಕಟ್ಟೆ ಗ್ರಾಮದ
ದಿ. ಚಿಕ್ಕಪ್ಪರ ಕರಿಯಪ್ಪನವರ ಧರ್ಮಪತ್ನಿ
**ಶ್ರೀಮತಿ ಬೆನಕಮ್ಮ** (91 ವರ್ಷ)
ಅವರು ದಿನಾಂಕ 09-01-2022 ರ ಭಾನುವಾರ ರಾತ್ರಿ 9-30 ಕ್ಕೆ ನಿಧನರಾದರು. ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10-01-2022 ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ಜಿ.ಟಿ. ಕಟ್ಟೆಯಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತರು :
**ಸಿ.ಕೆ. ಕೆಂಚಪ್ಪ ಮತ್ತು ಸಹೋದರರು ಹಾಗೂ ಚಿಕ್ಕಪ್ಪರ ವಂಶಸ್ಥರು**

|| ಶ್ರೀ ಕೊಡೆಕಲ್ ಬಸವೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



**ದಾವಣಗೆರೆ ಸಿಟಿ ವಾಸಿ**
**ಶ್ರೀ ಯಳವರ ಶಿವಕುಮಾರ್ ಮತ್ತು ಮಕ್ಕಳು**
**ಇವರು ಮಾಡುವ ವಿಜ್ಞಾಪನೆಗಳು.**
ದಿನಾಂಕ 02-01-2022 ನೇ ಭಾನುವಾರ ಬೆಳಿಗ್ಗೆ 02-30 ಕ್ಕೆ ನನ್ನ ಧರ್ಮಪತ್ನಿ
**ಶ್ರೀಮತಿ ರತ್ನಮ್ಮ**
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
**ದಿನಾಂಕ 10-01-2022 ನೇ ಸೋಮವಾರ ಬೆಳಿಗ್ಗೆ 10-30 ಕ್ಕೆ ದಾನಮ್ಮ ದೇವಿ ದೇವಸ್ಥಾನ ಬಸವ ಮಂಟಪ, ದೊಡ್ಡಪೇಟೆ, ದಾವಣಗೆರೆಯಲ್ಲಿ**
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀ ಯಳವರ ಶಿವಕುಮಾರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

## ಚಿತ್ರದುರ್ಗದಲ್ಲಿ ಇಂದು ಭೋವಿ ಸಮಾಜದ ಸಭೆ

ಚಿತ್ರದುರ್ಗದ ಭೋವಿ ಗುರು ಪೀಠದಲ್ಲಿ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಜಿಲ್ಲಾ ಭೋವಿ ಸಮಾಜದ ಸಭೆ ಏರ್ಪಡಿಸಲಾಗಿದೆ ಎಂದು ಸಮಾಜದ ಕಾರ್ಯಾಧ್ಯಕ್ಷ ಹೆಚ್. ಜಯಣ್ಣ ತಿಳಿಸಿದ್ದಾರೆ.

ಭೋವಿ ಸಮಾಜದ ಪದಾಧಿಕಾರಿಗಳು, ಸಮಾಜ ಬಾಂಧವರು ಈ ಸಭೆಯಲ್ಲಿ ಭಾಗವಹಿಸಿ, ಸಲಹೆ - ಸೂಚನೆ ನೀಡುವಂತೆ ಜಯಣ್ಣ ಅವರು ಕೋರಿದ್ದಾರೆ.

## ಆವರಗೆರೆ ಕರಿಯಪ್ಪ ಬಿ. ಗುಡ್ಡೇಕರ್ ನಿಧನ



ದಾವಣಗೆರೆ ತಾಲ್ಲೂಕು ಆವರಗೆರೆ ಗ್ರಾಮದ ವಾಸಿ ಹಿರೇಬಿದರಿಯ ಕರಿಯಪ್ಪ ಬಿ. ಗುಡ್ಡೇಕರ್ (70) ಅವರು ದಿನಾಂಕ 09.01.2022ರ ಭಾನುವಾರ ರಾತ್ರಿ 11 ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 10.01.2022ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ಆವರಗೆರೆ ರುದ್ರಭೂಮಿಯಲ್ಲಿ ನೆರವೇರಲಿದೆ.

# ಕಾನೂನಿಗೆ ಗೌರವ ನೀಡುವುದು ಕರ್ತವ್ಯವಲ್ಲವೇ ?

## ಸಿದ್ದರಾಮಯ್ಯ-ಡಿಕೆಶಿ ಪಾದಯಾತ್ರೆ ಕ್ರಮಕ್ಕೆ ಬಿಜೆಪಿ ಮುಖಂಡ ರಾಜಶೇಖರ್ ಖಂಡನೆ

ದಾವಣಗೆರೆ, ಜ.9- ಕೊರೊನಾ ಸಂದರ್ಭದಲ್ಲಿ ಮೇಕೆದಾಟು ಯೋಜನೆಯ ಅನುಷ್ಠಾನ ಒತ್ತಾಯಿಸಿ, ಪಾದಯಾತ್ರೆ ಹಮ್ಮಿಕೊಂಡಿರುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳ ಕ್ರಮವನ್ನು ಬಿಜೆಪಿ ಮುಖಂಡ ಎನ್. ರಾಜಶೇಖರ್ ಖಂಡಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಹಾಗೂ ಮಂತ್ರಿಗಳಾಗಿದ್ದ ನೀವು ರಾಜ್ಯದ ಸಂವಿಧಾನ ಹಾಗೂ ಕಾನೂನಿಗೆ ಗೌರವ ಕೊಡಬೇಕಾಗಿದ್ದು ನಿಮ್ಮ ಕರ್ತವ್ಯವಲ್ಲವೇ? ವಿರೋಧ ಪಕ್ಷದ ನಾಯಕನಾಗಿ ರಾಜ್ಯದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ನಿಮ್ಮ ಕರ್ತವ್ಯವಲ್ಲವೇ? ಎಂದು ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರನ್ನು ಪ್ರಶ್ನಿಸಿದ್ದಾರೆ.

ನಮ್ಮ ದೇಶವೂ ಸೇರಿದಂತೆ, ಪ್ರಪಂಚವೇ ಕೊರೊನಾದಿಂದಾಗಿ ನಲುಗುತ್ತಿದೆ. ಇಂತಹ ವೇಳೆ ನೀವು ಕೇವಲ ರಾಜಕಾರಣಕ್ಕೆ ಹಾಗೂ ಅಧಿಕಾರಕ್ಕಾಗಿ ಜನರ ಪ್ರಾಣದ ಜೊತೆ ಆಟವಾಡುವುದು ಎಷ್ಟು ಸರಿ ? ರಾಜ್ಯದಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಕೇಸ್‌ಗಳು ದಾಖಲಾಗುತ್ತಿರುವ ಇಂತಹ ತುರ್ತು ಪರಿಸ್ಥಿತಿಯಲ್ಲಿ ತಮ್ಮ ಪಾದಯಾತ್ರೆಯ ಅವಶ್ಯಕತೆ ಇತ್ತೇ? ಎಂದು ರಾಜಶೇಖರ್ ಟೀಕಿಸಿದ್ದಾರೆ.

ಮೇಕೆದಾಟು ಯೋಜನೆ ಅನುಷ್ಠಾನ ಗೊಳಿಸಲೇ ಬೇಕೆಂಬ ಇಚ್ಛಾಶಕ್ತಿ ಇದ್ದರೆ ನೀವೇ ಮುಖ್ಯ ಮಂತ್ರಿಯಾಗಿದ್ದಾಗ ಹಾಗೂ ನೀರಾವರಿ ಸಚಿವರಾಗಿದ್ದಾಗ ಏಕೆ ಅನುಷ್ಠಾನಗೊಳಿಸಲಿಲ್ಲ? ಕಳೆದ ಮೂರು ವರ್ಷದಲ್ಲಿ ವಿಧಾನಸಭೆ ಅಧಿವೇಶನದಲ್ಲಿ ಯಾಕೆ ಚರ್ಚಿಸಲಿಲ್ಲ? ಹೋರಾಟ ಮಾಡುವುದೇ ಆದಲ್ಲಿ ಕೊರೊನಾ ಕಡಿಮೆಯಾದ ನಂತರ ಮಾಡಬಹುದಿತ್ತಲ್ಲವೇ? ಈ ಎಲ್ಲಾ ಅಂಶಗಳನ್ನು ಗಮನಿಸಿದಲ್ಲಿ ನಿಮಗೆ ರಾಜ್ಯದ ಜನರ ನೀರಿನ ಕಾಳಜಿಗಿಂತ, ರೈತರ ಮೇಲಿನ ಕಾಳಜಿಗಿಂತ ಕೇವಲ ನಿಮ್ಮ ಅಧಿಕಾರ ಹಾಗೂ ಕೆಟ್ಟ ರಾಜಕಾರಣ ಎದ್ದು ಕಾಣುತ್ತಿದೆ ಎಂದವರು ಹೇಳಿದ್ದಾರೆ.



ರಾಜ್ಯದಲ್ಲಿ ಕೊರೊನಾ ಕೇಸ್ ದಾಖಲಾಗುತ್ತಿಲ್ಲ. ಸರ್ಕಾರವೇ ಅಧಿಕಾರಿ ಗಳಿಂದ ಕೇಸ್‌ಗಳನ್ನು ದಾಖಲಿಸುತ್ತಿದ್ದಾರೆ ಎಂದು ಹೇಳಿಕೆ ನೀಡಿದ್ದೀರಿ. ಆದರೆ ಅತಿ ಹೆಚ್ಚು ಕೇಸ್‌ಗಳು ದಾಖಲಾಗುತ್ತಿರುವುದು ತಮ್ಮದೇ ಪಕ್ಷದ ನೇತೃತ್ವವಿರುವ ಮಹಾರಾಷ್ಟ್ರದಲ್ಲಿ ಅಲ್ಲವೇ? ಇದಕ್ಕೆ ಏನು ಹೇಳುತ್ತೀರಿ?

ಈಗಾಗಲೇ ನಿಮ್ಮ ಪಾದಯಾತ್ರೆ ಯಲ್ಲಿ ಪಾಲ್ಗೊಂಡಿರುವ ಮಾಜಿ ಮುಖ್ಯಮಂತ್ರಿಗಳು ಜ್ವರದಿಂದ ಬಳಲುತ್ತಿದ್ದು ಪಾದಯಾತ್ರೆಯಿಂದ ವಾಪಸ್ಸಾಗಿದ್ದಾರೆ. ಅವರಿಗೆ ಸರ್ಕಾರ ವೆಚ್ಚ ಭರಿಸುತ್ತದೆ. ಸಾಮಾನ್ಯ ಜನರಿಗೆ ಯಾರು ಭರಿಸುತ್ತಾರೆ ತಿಳಿಸಿ. ನಿಮ್ಮ ಪಾದಯಾತ್ರೆ ನಿಲ್ಲಿಸಿ ವಿಧಾನ ಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಚರ್ಚಿಸಿ ಸರ್ಕಾರವನ್ನು ಕಟ್ಟಿ ಹಾಕಿ, ಅದು ಬಿಟ್ಟು ಜನರ ಪ್ರಾಣದ ಜೊತೆ ಚೆಲ್ಲಾಟವಾಡಬೇಡಿ ಎಂದು ರಾಜಶೇಖರ್ ಪತ್ರಿಕಾ ಹೇಳಿಕೆ ಮೂಲಕ ಕುಟುಕಿದ್ದಾರೆ.





ದಾವಣಗೆರೆ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ವಿರಳವಾಗಿರುವುದು. ಪಿ.ಬಿ. ರಸ್ತೆಯಲ್ಲಿ ಪೊಲೀಸರು ದಂಡ ವಿಧಿಸುತ್ತಿರುವುದು (ಬಲಚಿತ್ರ)

# ವೀಕೆಂಡ್ ಕರ್ಫ್ಯೂ: ಭಾನುವಾರವೂ ದೇವನಗರಿ ಸ್ತಬ್ಧ

ದಾವಣಗೆರೆ, ಜ.9- ರಾಜ್ಯ ಸರ್ಕಾರದ ವಾರಾಂತ್ಯದ ಕರ್ಫ್ಯೂಗೆ ಭಾನುವಾರವೂ ಸಹ ಉತ್ತಮ ಸ್ಪಂದನೆ ದೊರೆತಿದೆ. ಗ್ರಾಮೀಣ ಭಾಗದ ಜನತೆ ನಗರದತ್ತ ಸುಳಿಯದ ಕಾರಣ ಹಾಗೂ ಶಾಲಾ-ಕಾಲೇಜುಗಳು, ಕಚೇರಿಗಳಿಗೆ ರಜೆ ಇದ್ದ ಕಾರಣ ನಗರ ಬಹುತೇಕ ಸ್ತಬ್ಧವಾಗಿತ್ತು.

ಭಾನುವಾರ ಜನರಿಂದ ತುಂಬಿಕೊಂಡಿರುತ್ತಿದ್ದ ಕಾಳಿಕಾದೇವಿ ರಸ್ತೆ, ಗಡಿಯಾರ ಕಂಬ, ಕೆ.ಆರ್. ಮಾರ್ಕೆಟ್, ಮಂಡಿಪೇಟೆ, ಚೌಕಿಪೇಟೆ ರಸ್ತೆಗಳು ಬಿಕೋ ಎನ್ನುತ್ತಿದ್ದವು. ತರಕಾರಿ ಮಾರಾಟ ನಡೆಯುತ್ತಿತ್ತಾದರೂ ಕೊಳ್ಳುವವರಿರಲಿಲ್ಲ. ಹಾಲು, ಹಣ್ಣು, ತರಕಾರಿ, ಕಿರಾಣಿ ಅಂಗಡಿಗಳು, ಹೂವು, ಮೀನು, ಮಾಂಸದ ಅಂಗಡಿಗಳು ಎಂದಿನಂತೆ ಬಾಗಿಲು ತೆರೆದಿದ್ದವು. ಮಾಂಸದ ಅಂಗಡಿಗಳನ್ನು ಹೊರತುಪಡಿಸಿದರೆ ಉಳಿದೆಡೆ ಗ್ರಾಹಕರ ಸಂಖ್ಯೆ ಕ್ಷೀಣವಾಗಿತ್ತು.

ಪ್ರಮುಖ ರಸ್ತೆಗಳನ್ನೊರತುಪಡಿಸಿದರೆ ಬಡಾವಣೆಯ ಚಿಕ್ಕ ಪುಟ್ಟ ರಸ್ತೆಗಳ ಫುಟ್‌ಪಾತ್ ಮೇಲೆ ಸಂಜೆ ವೇಳೆ ತಿಂಡಿ ಗಾಡಿಗಳು ಆರಂಭವಾಗಿದ್ದವು. ಶನಿವಾರ ತೆರೆಯಲ್ಪಟ್ಟಿದ್ದ ಬಹುತೇಕ ಹೋಟೆಲ್‌ಗಳು ಗ್ರಾಹಕರ ಕೊರತೆಯಿಂದಾಗಿ ಇಂದು ಬಾಗಿಲು ಮುಚ್ಚಿದ್ದವು.

**ಪೊಲೀಸ್ ಕಾರ್ಯಾಚರಣೆ:** ಪಿ.ಬಿ ರಸ್ತೆ ಸೇರಿದಂತೆ ಕೆಲವೆಡೆ ಪೊಲೀಸರು ಅನಗತ್ಯವಾಗಿ ತಿರುಗಾಡುತ್ತಿದ್ದವರಿಗೆ ದಂಡದ ರುಚಿ ತೋರಿಸಿದರು. ಬೈಕು, ಕಾರು ಸೇರಿದಂತೆ ವಾಹನಗಳನ್ನು ತಡೆದು, ಪೊಲೀಸರು ಓಡಾಟದ ಕಾರಣ ಕೇಳುತ್ತಿದ್ದುದು ಕಂಡು ಬಂತು.

# ಹರಿಹರ : ಬಿಕೋ ಎಂದ ರಸ್ತೆಗಳು

ಹರಿಹರ, ಡಿ. 9 – ಕೊರೊನಾ ಹಿನ್ನೆಲೆಯಲ್ಲಿ ನಗರದಲ್ಲಿ ವಾರಾಂತ್ಯದ ಕರ್ಫ್ಯೂ ನಿಮಿತ್ತವಾಗಿ ಭಾನುವಾರ ಸಹ ಜನದಟ್ಟಣೆಯ ಕಡಿಮೆ ಇದ್ದುದ್ದರಿಂದ ರಸ್ತೆಗಳು ಬಿಕೋ ಎನ್ನುತ್ತಿದ್ದವು.

ನಗರದ ತರಕಾರಿ, ಹಣ್ಣು, ಹಾಲು, ಗೊಬ್ಬರ, ಎಳನೀರು, ಔಷಧಿ, ಹೂವು, ಕಿರಾಣಿ, ಮಟನ್ ಅಂಗಡಿಗಳು ಮಾತ್ರ ತೆರೆದುಕೊಂಡು ವ್ಯಾಪಾರ - ವಹಿವಾಟು ನಡೆಸಿದವು. ಉಳಿದಂತೆ ಬಟ್ಟೆ, ಬಂಗಾರ, ಮದ್ಯಪಾನ, ಆಟೋ ಮೊಬೈಲ್, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್, ಸ್ಟೇಷನರಿ, ಹಾರ್ಡವೇರ್, ಗ್ಯಾರೇಜ್, ಟೈಲರ್, ಮೊಬೈಲ್, ಟಿ.ವಿ. ಸೇರಿದಂತೆ ಎಲ್ಲಾ ಅಂಗಡಿಗಳನ್ನು ಬಂದ್ ಮಾಡಲಾಗಿತ್ತು. ಡಾಬಾ ಮತ್ತು ಹೋಟೆಲ್‌ಗಳು ಊಟ, ತಿಂಡಿಯನ್ನು ಪಾರ್ಸೆಲ್ ಕೊಟ್ಟವು. ಬಸ್ ಸಂಚಾರ ಇದ್ದರೂ ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆ ಇತ್ತು. ಗ್ರಾಮೀಣ ಪ್ರದೇಶದ ಜನರು ಸಹ ನಗರಕ್ಕೆ ಆಗಮಿಸಿದ್ದು ಕಡಿಮೆಯೇ.

ಪ್ರತಿನಿತ್ಯವೂ ಸಹಸ್ರಾರು ಸಂಖ್ಯೆಯಲ್ಲಿ ವ್ಯಾಪಾರ - ವಹಿವಾಟು ನಡೆಸುವ ವ್ಯಾಪಾರ ಸ್ಥಳದಲ್ಲಿ ಸಾರ್ವಜನಿಕರು ಇಲ್ಲದೆ ರಸ್ತೆಗಳು ಬೀಕೋ ಎನ್ನುತ್ತಿದ್ದವು. ಒಟ್ಟಾರೆಯಾಗಿ ನಗರದಲ್ಲಿ ಎಲ್ಲಾ ರೀತಿಯ ವ್ಯಾಪಾರ - ವಹಿವಾಟು ಬಂದ್ ಮಾಡುವ ಮೂಲಕ ಎರಡನೇ ದಿನದ ಕರ್ಫ್ಯೂಗೆ ಸಾರ್ವಜನಿಕರು ಉತ್ತಮ ಬೆಂಬಲ ನೀಡಿದರು.

ಸಾರ್ವಜನಿಕರು ಮತ್ತು ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಬಂದ್‌ಗೆ ಸಹಕಾರ ನೀಡುತ್ತಿರುವುದು ಕಂಡುಬಂದಿದೆ.

# ಹರಪನಹಳ್ಳಿ : ಉತ್ತಮ ಪ್ರತಿಕ್ರಿಯೆ



ಹರಪನಹಳ್ಳಿ, ಜ.9- ಕೊರಾನಾ ಮೂರನೇ ಅಲೆ ಹಾಗೂ ಓಮಿಕ್ರಾನ್ ವೈರಸ್ ನಿಯಂತ್ರಿಸಲು ಸರ್ಕಾರ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿದ ಹಿನ್ನೆಲೆಯಲ್ಲಿ ಎರಡನೇ ದಿನವಾದ ಭಾನುವಾರ ತಾಲೂಕಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಪಟ್ಟಣದಲ್ಲಿ ಮೆಡಿಕಲ್ ಶಾಪ್, ಆಸ್ಪತ್ರೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಅಂಗಡಿ ಮುಂಗಟ್ಟುಗಳು ಸಂಪೂರ್ಣವಾಗಿ ಬಂದ್ ಆಗಿದ್ದವು. ಇನ್ನು ಪಟ್ಟಣದ ಪ್ರಮುಖ ಸರ್ಕಲ್, ರಸ್ತೆಗಳಲ್ಲಿ ಅನಗತ್ಯವಾಗಿ ಮಾಸ್ಕ್ ಧರಿಸದೇ ಓಡಾಡುತ್ತಿದ್ದ ಬೈಕ್ ಸವಾರರನ್ನು ಅಲ್ಲಲ್ಲಿ ತಡೆದು ಪೊಲೀಸರು ದಂಡ ವಿಧಿಸುತ್ತಿದ್ದ ಘಟನೆ ಕಂಡು ಬಂತು. ಸ್ವತಃ ವೃತ್ತ ನಿರೀಕ್ಷಕ ನಾಗರಾಜ್ ಎಂ.ಕಮ್ಮಾರ್ ಫೀಲ್ಡ್‌ಗಿಳಿದು ವಿವಿಧೆಡೆ ಮಾಸ್ಕ್ ಧರಿಸದೇ ಓಡಾಡುತ್ತಿದ್ದ ಬೈಕ್ ಸವಾರರಿಗೆ ದಂಡ ವಿಧಿಸಿ ಎಚ್ಚರಿಕೆ ನೀಡಿದರು. ನಂತರ ಉಚಿತ ಮಾಸ್ಕ್ ನೀಡಿ ಜಾಗೃತಿ ಮೂಡಿಸಿದರು.

# ಉದರ ನಿಮಿತ್ತಂ ಬಹುಕೃತ ವೇಷಂ



ಚಿತ್ರ : ಜಿಗಳಿ ಪ್ರಕಾಶ್

ಶನಿವಾರ ವೀಕೆಂಡ್ ಕರ್ಫ್ಯೂ ಇದ್ದರೂ ಹೊಟ್ಟೆಪಾಡಿಗಾಗಿ ತುಮ್ಮಿನಕಟ್ಟೆಯ ಐದು ಜನರ ತಂಡವು ಶಂಕರ-ಪಾರ್ವತಿ ಮತ್ತು ಭಸ್ಮಾಸುರ, ಸೇನಾಪತಿ ವೇಷಧಾರಿಗಳಾಗಿ ತಬಲಾ-ಹಾರ್ಮೋನಿಯಂ ನೊಂದಿಗೆ ಹಾಡು ಹೇಳುತ್ತಾ ಮನೆ ಮನೆಗೆ ತೆರಳಿ ಭಿಕ್ಷೆ ಬೇಡುತ್ತಿದ್ದ ಮನ ಸೆಳೆಯುವ ದೃಶ್ಯ ಜಿಗಳಿಯಲ್ಲಿ ಕ್ಯಾಮೆರಾ ಕಣ್ಣಿಗೆ ಸೆರೆ ಸಿಕ್ಕಿತು.

# ಯಡಿಹಳ್ಳಿ: ಮುಷ್ಯನ ದಾಳಿಯಿಂದ 9 ಜನಕ್ಕೆ ಗಾಯ



ಹರಪನಹಳ್ಳಿ, ಜ.9- ಮುಷ್ಯನ ದಾಳಿಯಿಂದ 9 ಜನರು ಗಾಯಗೊಂಡ ಘಟನೆ ತಾಲ್ಲೂಕಿನ ಯಡಿಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದಲ್ಲಿ ಸಾಕಷ್ಟು ಮುಷ್ಯಗಳು ಬೀಡು ಬಿಟ್ಟಿದ್ದು, ಕಳೆದ ಮೂರು ದಿನಗಳ ಕೆಳಗೆ ವಿದ್ಯುತ್ ತಗುಲಿ ಒಂದು ಮುಷ್ಯ ಸಾವನ್ನಪ್ಪಿತ್ತು. ಆ ಮೃತ ಮುಷ್ಯದ ಅಂತ್ಯಕ್ರಿಯೆ ನಡೆಸಲಾಗಿತ್ತು.

ಅದಾದ ನಂತರ ಇನ್ನೊಂದು ಮುಷ್ಯ ಜನರನ್ನು ಕಂಡರೆ ಸಾಕು ಓಡೋಡಿ ಬಂದು ಕಾಲಿಗೆ, ಕೈಯ್ಯಿಗೆ ಎಲ್ಲೆಂದರಲ್ಲಿ ಕಚ್ಚಿ ಗಾಯಗೊಳಿಸಲು ಆರಂಭಿಸಿತು ಎಂಬುದು ಗ್ರಾಮ ಪಂಚಾಯ್ತಿ ಸದಸ್ಯ ಎಂ.ವಿಜಯಕುಮಾರ್ ಅವರ ಹೇಳಿಕೆ ಯಾಗಿದ್ದು, ಎಚ್ .ಕೃಪ, ಶೇಖರಪ್ಪ, ಕೊಳ್ಳೇರ ವೆಂಕಟೇಶ, ಅರುಣ ಸೇರಿದಂತೆ 9 ಜನರಿಗೆ ಕೈಗೆ, ಬೆನ್ನಿಗೆ, ಕಾಲಿನ ಹಿಂಬಡಿಗೆ ಕಡಿದು ಗಾಯಗೊಳಿಸಿದೆ. ಕೃಪ ಎಂಬುವವರಿಗೆ 10 ಹೊಲಿಗೆ, ಶೇಖರಪ್ಪ ಎಂಬುವವರಿಗೆ ತೆಲಿಗಿ ಗ್ರಾಮದ ಸಾರ್ವಜನಿಕ ಆಸ್ಪತ್ರೆಯಲ್ಲಿ 15 ಹೊಲಿಗೆ ಹಾಕಿ ಚಿಕಿತ್ಸೆ ನೀಡಲಾಗಿದೆ.

ಗ್ರಾಮದಲ್ಲಿ ಜನರು ಕೋಲು ಹಿಡಿದುಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ, ಮಹಿಳೆಯರು ಹೆದರಿ ಹೊರಗಡೆ ಬರುವುದೇ ಇಲ್ಲ, ಅಕಸ್ಮಾತ್ ಬಂದರೂ ಗುಂಪಾಗಿ ಬರುತ್ತಾರೆ ಎಂದು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶೇಖರಪ್ಪ, ಗ್ರಾಮಸ್ಥರು ಹೇಳುತ್ತಾರೆ.

ವಲಯ ಅರಣ್ಯಾಧಿಕಾರಿ ಭರತ್ ತಳವಾರ ಪ್ರತಿಕ್ರಿಯೆ ನೀಡಿ, ಮುಷ್ಯಗಳನ್ನು ಹಿಡಿಯುವವರ ಸಂಪರ್ಕವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಪರಿಚಯಿಸಿ, ಕರೆಸಿ ಹಿಡಿಸಲು ಸೂಚಿಸಿದ್ದೇವೆ ಎಂದರು.

ಈ ಕುರಿತು ಗ್ರಾಮ ಪಂಚಾಯ್ತಿ ಪಿಡಿಓ ಚಂದ್ರಪ್ಪ ಪ್ರತಿಕ್ರಿಯೆ ನೀಡಿ, ರೋಣದಿಂದ ಮುಷ್ಯ ಹಿಡಿಯುವವರನ್ನು ಕರೆಸುತ್ತಿದ್ದೇವೆ, ಮುಷ್ಯಗಳನ್ನು ಹಿಡಿಸಿ, ಗ್ರಾಮಸ್ಥರ ಭಯ ಹೋಗಲಾಡಿಸುತ್ತೇವೆ ಎಂದು ಹೇಳಿದರು.

# ಕೊರೊನಾ ಲ್ಯಾಬ್ ವಿರುದ್ಧ ತನಿಖೆ

**ಇಟಲಿಯಿಂದ ಬಂದ ನೂರಾರು ಜನರಿಗೆ ಪಾಸಿಟಿವ್ ವರದಿ ನೀಡಿದ ಬಗ್ಗೆ ಅನುಮಾನ**

ಅಮೃತ್‌ಸರ (ಪಂಜಾಬ್), ಜ. 9 – ಇಟಲಿಯಿಂದ ಇತ್ತೀಚೆಗೆ ಮರಳಿದ್ದ ವಿಮಾನದಲ್ಲಿ ಅತಿ ಹೆಚ್ಚು ಜನರಿಗೆ ಕೊರೊನಾ ಇದ್ದುದಾಗಿ ವರದಿ ಮಾಡಿದ ಖಾಸಗಿ ಪ್ರಯೋಗಾಲಯದ ವಿರುದ್ಧ ತನಿಖೆಗೆ ಆದೇಶಿಸಲಾಗಿದೆ. ಪ್ರಯೋಗಾಲಯದ ವರದಿಯ ವಿರುದ್ಧ ಆರೋಪಗಳು ಕೇಳಿ ಬಂದಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಈ ನಡುವೆ, ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು ದೆಹಲಿ ಮೂಲದ ಪ್ರಯೋಗಾಲಯದ ಬದಲು ಸ್ಥಳೀಯ ಪ್ರಯೋಗಾಲಯದ ಸೇವೆ ಬಳಸಿಕೊಳ್ಳಲು ನಿರ್ಧರಿಸಿದೆ.

ಇಟಲಿಯಲ್ಲಿ ವಿಮಾನ ಏರುವ ಕೆಲವೇ ಗಂಟೆಗಳ ಮುಂಚೆ ಕೊರೊನಾ ಟೆಸ್ಟ್ ಮಾಡಿಸಿಕೊಂಡಾಗ ನೆಗೆಟಿವ್ ಬಂದಿತ್ತು. ಭಾರತದಲ್ಲಿ ನಡೆಸಲಾದ ಟೆಸ್ಟ್ ಪಾಸಿಟಿವ್ ಬಂದಿರುವ ಬಗ್ಗೆ ಹಲವಾರು ಪ್ರಯಾಣಿಕರು ಅನುಮಾನ ವ್ಯಕ್ತಪಡಿಸಿದ್ದರು. ಹಲವರು ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗದ್ದಲವನ್ನೂ ನಡೆಸಿದ್ದರು.

ಶ್ರೀ ಗುರು ರಾಮದಾಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಡೆಸಲಾದ ಟೆಸ್ಟ್‌ನಲ್ಲಿ ಪಾಸಿಟಿವ್ ಬಂದ ನಂತರ ಹಲವರು ಮರು ಪರೀಕ್ಷೆಗೆ ಒಳಗಾಗಿದ್ದರು. ಆಗ ಅವರ ಟೆಸ್ಟ್ ನೆಗೆಟಿವ್ ಬಂದಿತ್ತು.

ಪ್ರಯೋಗಾಲಯದಲ್ಲಿ ತಪ್ಪಾಗಿರುವ ಆರೋಪಗಳ ಬಗ್ಗೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ತನಿಖೆ ಆರಂಭಿಸಿದೆ. ದೆಹಲಿ ಮೂಲದ ಪ್ರಯೋಗಾಲಯದ ಬದಲು ಸ್ಥಳೀಯ ಪ್ರಯೋಗಾಲಯದ ಸೇವೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಆರೋಗ್ಯ ಇಲಾಖೆಯ ಅಧಿಕಾರಿ ಡಾ. ಅಮರ್‌ಜಿತ್ ಸಿಂಗ್ ತಿಳಿಸಿದ್ದಾರೆ.

ಕಳೆದ ಶುಕ್ರವಾರದಂದು ರೋಮ್‌ನಿಂದ ಅಮೃತ್‌ಸರಕ್ಕೆ ಬಂದಿದ್ದ ಖಾಸಗಿ ವಿಮಾನದ 173 ಪ್ರಯಾಣಿಕರಿಗೆ ಪಾಸಿಟಿವ್ ಇದೆ ಎಂದು ವರದಿ ನೀಡಲಾಗಿತ್ತು. ಇದಕ್ಕೂ ಮುಂಚೆ ಗುರುವಾರದಂದು ಇಟಲಿ ಮಿಲಾನ್‌ನಿಂದ ಬಂದ 125 ಪ್ರಯಾಣಿಕರಿಗೆ ಪಾಸಿಟಿವ್ ಇದೆ ಎಂದು ವರದಿ ನೀಡಲಾಗಿತ್ತು.

## ಜಿಲ್ಲೆಯಲ್ಲಿ 30 ಪಾಸಿಟಿವ್

ದಾವಣಗೆರೆ, ಜ.9- ಜಿಲ್ಲೆಯಲ್ಲಿ ಭಾನುವಾರ 30 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 20, ಜಗಳೂರು 6, ಚನ್ನಗಿರಿ 2 ಹಾಗೂ ಹೊರ ಜಿಲ್ಲೆಯಿಂದ ಬಂದ ಇಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಸೋಂಕಿತರಲ್ಲಿ ಹೆಚ್ಚು ಜನರು ,ಬೆಂಗಳೂರು ಸೇರಿದಂತೆ ಹೊರ ಜಿಲ್ಲೆಗಳಿಗೆ ಹೋಗಿ ಬಂದವರು ಹಾಗೂ ಅವರ ಜೊತೆ ಸಂಪರ್ಕದಲ್ಲಿದ್ದವರಾಗಿದ್ದು, ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಪ್ರಸ್ತುತ ಜಿಲ್ಲೆಯಲ್ಲಿ 77 ಸಕ್ರಿಯ ಪ್ರಕರಣಗಳಿವೆ.

# ಜೆಸಿ ಸೇವಾಕಾರ್ಯಕ್ಕೆ ಶಾಸಕರ ಶ್ಲಾಘನೆ



ರಾಣೇಬೆನ್ನೂರು, ಜ.9- ಕೋವಿಡ್ ಕಿಟ್ ವಿತರಣೆ, ಎಸ್ಸೆಸ್ಸೆಲ್ಸಿ ಪರೀಕ್ಷಾ ತರಬೇತಿ, ಗೋಶಾಲೆಗೆ ದಾನ ಮುಂತಾದ ಸಮಾಜ ಮುಖಿ ಕಾರ್ಯಕ್ರಮಗಳನ್ನು ನಡೆಸಿದ ಜೆಸಿಐ ಸಂಸ್ಥೆಯ ಸೇವಾಕಾರ್ಯ ಶ್ಲಾಘನೀಯ ಎಂದು ಶಾಸಕ ಅರುಣಕುಮಾರ ಪೂಜಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಅವರು ಇಲ್ಲಿನ ಕಾಕಿ ಜನಸೇವಾ ಟ್ರಸ್ಟ್ ಸಭಾಂಗಣದಲ್ಲಿ 2022-23 ರ ಪದಾಧಿಕಾರಿಗಳ ಸೇವಾ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಈ ವರ್ಷ ದಾನಕ್ಕೆ ಹೆಸರಾದ ಕಾಕಿ ಕುಟುಂಬದ ವೆಂಕಟೇಶ ಅಧ್ಯಕ್ಷರಾಗಿದ್ದು, ಇನ್ನು ಹೆಚ್ಚು ಸಮಾಜಮುಖಿ ಕಾರ್ಯಗಳು ನಡೆಯಲಿವೆ. ತಾವು ಸಹ ಈ ಸಂಸ್ಥೆಗೆ ತಮ್ಮ ಕೈಲಾದ ಸೇವೆ ಸಲ್ಲಿಸುವುದಾಗಿ ಶಾಸಕರು ಹೇಳಿದರು.

ಜೆಸಿ ಮತ್ತು ಜೆಸಿರೇಟ್ ಪದಾಧಿಕಾರಿಗಳಾದ ವೆಂಕಟೇಶ ಕಾಕಿ, ಹರೀಶ ಕೋಪರ್ಡೆ, ನಾರಾಯಣ ಬಿಸಲಳ್ಳಿ, ಪ್ರಕಾಶ ಬನ್ನಿಕೋಡು, ಸಿದ್ದಣ್ಣ ಅತಡಕರ, ಶ್ರೇಯಾ ಪಾಟೀಲ, ತೇಜಸ್ವಿನಿ ಕಾಕಿ, ಚೇತನಾ ಪಾಟೀಲ, ಶಿವಯೋಗಿ ಗೌಳಿ, ಲಕ್ಷ್ಮಿ ಕಾಕಿ, ಲಕ್ಷ್ಮಿ ಎಡಕೆ, ಅಶೋಕ ದುರ್ಗದಸೀಮಿ, ಪುಷ್ಪಾ ಬದಾಮಿ, ಚಂದನ ಭಸ್ಮಾಂಗಿಮಠ ಮುಂತಾದವರುಗಳಿಗೆ ವಲಯ ಅಧ್ಯಕ್ಷೆ ದೀಪಿಕಾ ಬಿದರಿ, ಉಪಾಧ್ಯಕ್ಷ ಗೌರೀಶ್ ಭಾರ್ಗವ ಅವರು ಪ್ರಮಾಣ ವಚನ ಬೋಧಿಸಿದರು.

ನೂತನ ಅಧ್ಯಕ್ಷ ವೆಂಕಟೇಶ ಕಾಕಿ ಮಾತನಾಡಿ, ಹಿಂದಿನ ಅಧ್ಯಕ್ಷರು ಮಾಡಿದ ಸೇವಾಕಾರ್ಯಗಳ ಜೊತೆಗೆ, ಸಂಸ್ಥೆ ವತಿಯಿಂದ ಶಾಲೆಗಳನ್ನು ತೆರೆಯುವ, ಹಾಗೂ ನೇತ್ರ ಚಿಕಿತ್ಸೆಗೆ ಒಳಗಾದವರಿಗೆ ಉಚಿತವಾಗಿ ಕನ್ನಡಕ ಕೊಡುವುದಾಗಿ ಹೇಳಿದರು.

ಆರ್.ವಿ. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಡಾ.ಎಸ್.ಎಸ್.ಹಿತ್ತಲಮನಿ, ಡಾ. ಗಣೇಶ ದೇವಗಿರಿಮಠ, ಲಕ್ಷ್ಮಣ ಕಣಕಿ, ಎಂ.ಎಂ. ಪಾಟೀಲ, ಮಂಜುನಾಥ ಗೋಂದಕರ, ಸಿದ್ದಣ್ಣ ಅತಡಕರ, ಪ್ರಭುಲಿಂಗಪ್ಪ ಹಲಗೇರಿ ಮತ್ತಿತರರಿದ್ದರು.

# ಸಂಗಮದಲ್ಲಿ ಮೊಳಗಿದ 'ಮೇಕೆದಾಟು ಕೂಗು'



## ಪಾದಯಾತ್ರೆಗಾಗಿ ಶಿಷ್ಟಾಚಾರ ಗಾಳಿಗೆ

**ಕನಕಪುರ, ಜ. 9 – ವಾರಾಂತ್ಯದ ಕರ್ಫ್ಯೂ ಸೇರಿದಂತೆ ಕೊರೊನಾದ ಎಲ್ಲಾ ಶಿಷ್ಟಾಚಾರಗಳನ್ನು ಗಾಳಿಗೆ ತೂರಿ ಕಾಂಗ್ರೆಸ್ ನಾಯಕರು ಮೇಕೆ ದಾಟು ಯೋಜನೆ ಜಾರಿಗೆ ಆಗ್ರಹಿಸಿ ಪಾದಯಾತ್ರೆ ಆರಂಭಿಸಿದ್ದಾರೆ. ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಸಂಗಮದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು. ಸುಮಾರು 25 ಸಾವಿರ ಜನರಿಗಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದ ಮುಂಚೂಣಿ ಯಲ್ಲಿದ್ದ ನಾಯಕರೇ ಮಾಸ್ಕ್ ಹಾಗೂ ಸಾಮಾಜಿಕ ಅಂತರವನ್ನು ಮರೆತಿದ್ದರು. ವಾರಾಂತ್ಯದ ಕರ್ಫ್ಯೂ ರಾಜ್ಯದ ಎಲ್ಲೆಡೆ ಜಾರಿಯಲ್ಲಿದ್ದರೆ, ಕನಕಪುರದಲ್ಲಿ ಮಾತ್ರ ಪರಿಸ್ಥಿತಿ ಭಿನ್ನವಾಗಿತ್ತು. ಸ್ಥಳೀಯ ಆಡಳಿತ ನಿನ್ನೆಯೂ ಕಾಂಗ್ರೆಸ್ ಮುಖಂಡರಿಗೆ ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸುವಂತೆ ತಿಳಿಸಿತ್ತು. ಆದರೆ, ಈ ಬಗ್ಗೆ ನಾಯಕರು ಕಿವಿಗೊಟ್ಟಿಲ್ಲ. ಬದಲಾಗಿ, ತಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ಸವಾಲೆಸೆದಿದ್ದಾರೆ.**

**ಭಾನುವಾರ ಆರಂಭವಾಗಿರುವ ಪಾದಯಾತ್ರೆ ಹತ್ತು ದಿನಗಳ ಕಾಲ ನಡೆಯಲಿದೆ. ಜನವರಿ 19ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಬೃಹತ್ ಸಾರ್ವಜನಿಕ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.**

**(1ನೇ ಪುಟದಿಂದ)** ವಿಸ್ತರಿಸಬೇಕೆಂದು ಕೇಂದ್ರ ಸರ್ಕಾರ ಯೋಜನೆ ತಡೆದಿದೆ. ರಾಜ್ಯ ಸರ್ಕಾರ ಪ್ರತಿನಿತ್ಯ ತಪ್ಪು ಮಾಹಿತಿಯ ಜಾಹೀರಾತುಗಳನ್ನು ನೀಡುತ್ತಿದೆ ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಿವಕುಮಾರ್, ಪಾದಯಾತ್ರೆ ನಿಲ್ಲಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಯತ್ನ ನಡೆಸಿದ್ದಾರೆ. ಸರ್ಕಾರ ತಮ್ಮನ್ನು ಬಂಧಿಸಲಿ ಎಂದು ಸವಾಲೆಸೆದರು.

ಈ ಪಾದಯಾತ್ರೆ ಕಾಂಗ್ರೆಸ್ ಪಕ್ಷಕ್ಕಾಗಿ ಅಲ್ಲ ಅಥವಾ ಅಧಿಕಾರಕ್ಕಾಗಿಯೂ ಅಲ್ಲ. ಜನರಿಗಾಗಿ ಪಾದಯಾತ್ರೆ ನಡೆಸುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿತ್ತು. ನಾವಿಂದು ಬಿಜೆಪಿ ಹಾಗೂ ಜನತಾ ದಳಗಳ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಗೃಹ ಸಚಿವರು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳು ನಮ್ಮ ವಿರುದ್ಧ ಹೊರಡಿಸಿರುವ ಆದೇಶ ಕಾನೂನಿಗೆ ವಿರುದ್ಧವಾಗಿದೆ ಎಂದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರಾದ ಡಾ. ಜಿ. ಪರಮೇಶ್ವರ್, ವೀರಪ್ಪ ಮೊಯ್ಲಿ, ಆರ್.ವಿ. ದೇಶಪಾಂಡೆ ಮತ್ತಿತರರು ಭಾಗವಹಿಸಿದ್ದರು.

## ಜ್ವರದಿಂದಾಗಿ ಪಾದಯಾತ್ರೆಯಿಂದ ನಿರ್ಗಮಿಸಿದ ಸಿದ್ದರಾಮಯ್ಯ

**ಮೇಕೆದಾಟು ಹೋರಾಟದ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ, ಜ್ವರದಿಂದಾಗಿ ಪಾದಯಾತ್ರೆಯನ್ನು ಅರ್ಧದಲ್ಲೇ ಬಿಟ್ಟು ಬೆಂಗಳೂರಿಗೆ ಮರಳಿದ್ದಾರೆ. ಜ್ವರ ಹಾಗೂ ಸುಸ್ತು ಕಾಣಿಸಿಕೊಂಡ ನಂತರ ಅವರು ವೈದ್ಯರ ತಪಾಸಣೆಗೆ ಒಳಗಾದರು. ವೈದ್ಯರ ಸಲಹೆಯಂತೆ ಅವರು ಪಾದಯಾತ್ರೆ ಬಿಟ್ಟು ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಿದ್ದರಾಮಯ್ಯನವರೇ ದಯವಿಟ್ಟು ವಿಶ್ರಾಂತಿ ತೆಗೆದುಕೊಳ್ಳಿ. ತಮ್ಮ ಆರೋಗ್ಯ ರಕ್ಷಣೆ ಮಹತ್ವದ್ದು ಎಂದಿದ್ದಾರೆ.**

## ಸರ್ವಧರ್ಮ ಮುಖಂಡರು ಭಾಗಿ

ಹಿಂದೂ, ಕ್ರೈಸ್ತ ಹಾಗೂ ಮುಸ್ಲಿಮ್ ಧರ್ಮಗುರುಗಳು ಸಸಿಗಳಿಗೆ ನೀರೆರೆಯುವುದರ ಮೂಲಕ ಪಾದಯಾತ್ರೆಗೆ ಚಾಲನೆ ನೀಡಿದರು.

ಕಾಂಗ್ರೆಸ್ ಪಕ್ಷದ ಶಾಸಕಿಯರು, ಕಾರ್ಯಕರ್ತೆಯರು ವೇದಿಕೆಯ ಬಳಿ ಇದ್ದ ಕಲಶಗಳಿಂದ ಹಂಡೆಗಳಿಗೆ ನೀರು ಸುರಿದರು. ಈ ಹಂಡೆಗಳನ್ನು ಬೆಂಗಳೂರು ನಗರಕ್ಕೆ ಹಾಗೂ ರೈತರಿಗೆ ತಲುಪಿಸಲಾಗುವುದು.

ರಾಜ್ಯಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಹಾಗೂ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಅವರು ನಗಾರಿ ಬಾರಿಸುವ ಮೂಲಕ ಪಾದಯಾತ್ರೆ ಸಮಾರಂಭದ ಉದ್ಘಾಟನೆ ನೆರವೇರಿಸಿದರು.

ಇದಕ್ಕೂ ಮುಂಚೆ ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸಂಗಮದಲ್ಲಿ ಸ್ನಾನ ಮಾಡಿದ ನಂತರ, ಪೂಜೆ ನೆರವೇರಿಸಿದರು. ನಂತರ ಮೇಕೆದಾಟು ಹೋರಾಟದ ಧ್ವಜ ಹಿಡಿದು ತೆಪ್ಪದ ಮೂಲಕ ಸಂಗಮದಿಂದ ವೇದಿಕೆಯ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

## ನಾಯಕರನ್ನು ಬಂಧಿಸಲು ಡಿಕೆಶಿ ಸವಾಲು



ಪಾದಯಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪಾದಯಾತ್ರೆಯಲ್ಲಿ ಪಾಲ್ಗೊಂಡಿರುವ ಕಾಂಗ್ರೆಸ್ ನಾಯಕರು, ಶಾಸಕರು ಹಾಗೂ ಧರ್ಮ ಗುರುಗಳನ್ನು ಬಂಧಿಸುವಂತೆ ಸರ್ಕಾರಕ್ಕೆ ಸವಾಲೆಸೆದಿದ್ದಾರೆ.

ಪಾದಯಾತ್ರೆ ತಡೆಯಲು ಜಿಲ್ಲಾಧಿಕಾರಿಗಳಿಗೆ ಹೇಳಿ ನಿಷೇಧಾಜ್ಞೆ ಜಾರಿಗೆ ತರಲಾಗಿದೆ. ಪ್ರಕರಣ ದಾಖಲಿಸಿ ಬಂಧಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಗಿದೆ ಎಂದು ಶಿವಕುಮಾರ್ ಕಿಡಿ ಕಾರಿದರು. ಇಲ್ಲಿ ಹಾರಿಸಲಾಗುತ್ತಿರುವ ರಾಷ್ಟ್ರಧ್ವಜ, ಕಾಂಗ್ರೆಸ್ ಧ್ವಜ, ಕನ್ನಡ ತಾಯಿ ಧ್ವಜ, ರೈತರ ಧ್ವಜ, ಮೇಕೆದಾಟು ಹೋರಾಟದ ಧ್ವಜವನ್ನು ನಿಮ್ಮ ಕೈಯಲ್ಲಿ ಮುಟ್ಟಲು ಸಾಧ್ಯವಿಲ್ಲ. ಹರಿಯುವ ನೀರು, ಬೀಸುವ ಗಾಳಿ ಹಾಗೂ ಸೂರ್ಯನ ನಿಲ್ಲಿಸಲು ಆಗುವುದಿಲ್ಲ ಎಂದವರು ಗುಡುಗಿದರು.

# ಕಳಪೆ ಆಹಾರದಿಂದ ಬೇಸತ್ತು ಹಾಸ್ಟೆಲ್ ಬಿಟ್ಟು ಹೋಗುತ್ತಿರುವ ವಿದ್ಯಾರ್ಥಿನಿಯರು

## ಹರಿಹರದಲ್ಲಿ ಎಸ್ಸಿ, ಎಸ್ಟಿ ಜಾಗೃತಿ ಸಭೆ



ಹರಿಹರ, ಡಿ.9- ನಗರಸಭೆಯಿಂದ ಪೌರ ಕಾರ್ಮಿಕರಿಗೆ ಕಳಪೆ ಸೈಕಲ್, ಸ್ಮಶಾನದ ಜಾಗದ ಒತ್ತುವರಿ ತೆರವು, ಸಮಾಜ ಕಲ್ಯಾಣ ಇಲಾಖೆ ಹಾಸ್ಟೆಲ್‌ಗಳಲ್ಲಿನ ಕಳಪೆ ಆಹಾರ, ದೇವದಾಸಿಯರಿಗೆ ಬಾರದ ಮಾಸಿಕ ವೇತನ, ವಸತಿ ಯೋಜನೆ ಸೇರಿದಂತೆ ನಾನಾ ಸಮಸ್ಯೆಗಳನ್ನು ನಗರದ ತಾಲ್ಲೂಕು ಪಂಚಾಯ್ತಿ ಸಭಾಂಗಣದಲ್ಲಿ ನಿನ್ನೆ ನಡೆದ ಎಸ್ಸಿ, ಎಸ್ಟಿ ಜನಾಂಗದ ಜಾಗೃತಿ ಸಭೆಯಲ್ಲಿ ಪ್ರಸ್ತಾಪಿತವಾದವು.

ಶಾಸಕ ಎಸ್.ರಾಮಪ್ಪ ಅಧ್ಯಕ್ಷತೆ ವಹಿಸಿದ್ದರು. ದಸಂಸ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ಮಾತನಾಡಿ, ನಗರದ ಎಸ್‌ಜೆವಿಪಿ ಪಾಲಿಟೆಕ್ನಿಕ್ ಕ್ಯಾಂಪಸ್‌ನ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರ ಮಹಿಳಾ ಹಾಸ್ಟೆಲ್ ಇದೆ.

ಹಾಸ್ಟೆಲ್ ನಿವಾಸಿಗಳು ವಿದ್ಯಾರ್ಥಿನಿಯರಿದ್ದಾರೆ, ಅವರು ಪ್ರಶ್ನೆ ಮಾಡುವುದಿಲ್ಲವೆಂದು ಅತ್ಯಂತ ಕಳಪೆ ಗುಣಮಟ್ಟದ ಆಹಾರ ನೀಡಲಾಗುತ್ತಿದೆ. ಉತ್ತಮ ಆಹಾರ ನೀಡಿ ಎಂದರೆ, ಸರ್ಕಾರ ಕೊಡುವ 50 ರೂ.ನಲ್ಲಿ ಇಷ್ಟೇ ಕೊಡಲು ಸಾಧ್ಯ ಎಂದು ಅಲ್ಲಿನ ಸಿಬ್ಬಂದಿ ವಿದ್ಯಾರ್ಥಿನಿಯರ ಬಾಯಿ ಮುಚ್ಚಿಸುತ್ತಿದ್ದಾರೆ.

ಕಳಪೆ ಆಹಾರ, ಸಿಬ್ಬಂದಿಗಳ ವರ್ತನೆಯಿಂದ ಬೇಸತ್ತು ಹಾಸ್ಟೆಲ್ ಬಿಡಲು ನಿವಾಸಿಗಳು ಮುಂದಾಗುತ್ತಿದ್ದಾರೆ. ಇದರಿಂದ ಅವರ ಶಿಕ್ಷಣವೂ ಅರ್ಧಕ್ಕೆ ನಿಲ್ಲುವ ಆತಂಕವಿದೆ. ಸಂಬಂಧಿತ ಅಧಿಕಾರಿಗಳೂ ಕೂಡ ನಿರ್ಲಕ್ಷ್ಯ ವಹಿಸುತ್ತಿದ್ದಾರೆ ಎಂದು ಆರೋಪಿಸಿದರು.

ತಾಲ್ಲೂಕಿನಲ್ಲಿನ ಅಪಾರ ಸಂಖ್ಯೆಯ ದೇವದಾಸಿಯರು, ವಿಧವೆಯರು, ವೃದ್ಧಾಪ್ಯರು ಪಡೆಯುವ ಮಾಸಿಕ ವೇತನ ನಿಯಮಿತವಾಗಿಲ್ಲ. ಇವರಲ್ಲಿನ ಕಡುಬಡವರು ಸಂಕಷ್ಟಕ್ಕೀಡಾಗುತ್ತಿದ್ದಾರೆ. ನಿಯಮಿತವಾಗಿ ವೇತನ ದೊರಕಬೇಕಾಗಿದೆ ಎಂದ ಅವರು, ತಾಲ್ಲೂಕಿನಲ್ಲಿರುವ ನಿರ್ವಸತಿಗರಿಗೆ ವಸತಿ ಯೋಜನೆ ಜಾರಿ ಮಾಡಬೇಕಾಗಿದೆ ಎಂದು ಒಟ್ಟು 13 ಬೇಡಿಕೆಗಳ ಮನವಿಯನ್ನು ಶಾಸಕ ಎಸ್.ರಾಮಪ್ಪ ಮತ್ತು ತಹಸೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಅವರಿಗೆ ಸಲ್ಲಿಸಿದರು.

ಹಿರಿಯ ಕ್ರೀಡಾಪಟು ಎಚ್.ನಿಜಗುಣ ಮಾತನಾಡಿ, ನಗರಸಭೆಯಿಂದ ಪೌರ ಕಾರ್ಮಿಕರಿಗೆ ಸೈಕಲ್ ವಿತರಣೆಯಲ್ಲಿ ಅಕ್ರಮ ನಡೆದಿದೆ. ನಗರಸಭಾ ಸದಸ್ಯರೇ ಈ ಕುರಿತು ಆರೋಪ ಮಾಡಿದರೂ ಪ್ರಕರಣವನ್ನು ಮುಚ್ಚಿ ಹಾಕಲಾಗಿದೆ ಎಂದು ಆರೋಪಿಸಿದರು.

ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಪ್ರತಿಕ್ರಿಯಿಸಿ, ಪೌರ ಕಾರ್ಮಿಕರಿಗೆ ಗುಣಮಟ್ಟದ ಸೈಕಲ್ ವಿತರಿಸಲಾಗಿದೆ, ಅಕ್ರಮ ನಡೆದಿಲ್ಲ ಎಂದರು.

ದಸಂಸ ತಾಲ್ಲೂಕು ಮಹಿಳಾ ಸಂಚಾಲಕರಾದ ಭಾನುವಳ್ಳಿ ಚೌಡಮ್ಮ ಮಾತನಾಡಿದರು.

ಡಿಎಸ್-4 ಮುಖಂಡ ಸಂತೋಷ್ ನೋಟದವರ್ ಮಾತನಾಡಿ, ಕ್ರೀಡಾ ಇಲಾಖೆಯ ವಾಣಿಜ್ಯ ಸಂಕೀರ್ಣದಲ್ಲಿನ ಮಳಿಗೆಗಳ ಮರು ಹಂಚಿಕೆಯಲ್ಲಿ ನಿಯಮ ಪಾಲನೆಯಾಗಿಲ್ಲ. ಇದರಿಂದ ಎಸ್ಸಿ, ಎಸ್ಟಿ ಜನಾಂಗದ ನಿರುದ್ಯೋಗಿಗಳಿಗೆ ಅನ್ಯಾಯವಾಗಿದೆ ಎಂದರು.

ಸಿಪಿಐ ಸತೀಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಸೈಯದ್ ನಾಸಿರುದ್ದೀನ್, ತಾಪಂ ಇಓ ಗಂಗಾಧರನ್, ಬಿಇಓ ಬಿ.ಸಿ. ಸಿದ್ದಪ್ಪ, ದಲಿತ ಮುಖಂಡರಾದ ಎಲ್. ನಿರಂಜನಮೂರ್ತಿ, ಎಚ್.ಮಲ್ಲೇಶ್, ಎಲ್.ಬಿ.ಹನುಮಂತಪ್ಪ, ಬಿಎಸ್ಪಿ ಮುಖಂಡ ಡಿ.ಹನುಮಂತಪ್ಪ, ಬಿ.ಎನ್. ರಮೇಶ್, ಭಾನುವಳ್ಳಿ ಮಂಜಪ್ಪ, ವೈ. ರಘುಪತಿ, ಜಿಗಳಿ ಪ್ರಕಾಶ್, ವಾಸನದ ಮಂಜುನಾಥ್, ಭಾನುವಳ್ಳಿ ಸಿ.ಚೌಡಪ್ಪ, ಕೆ.ಎನ್.ಹಳ್ಳಿ ಹನುಮಂತಪ್ಪ, ರೇಣುಕಮ್ಮ, ಮಿಟ್ಲಕಟ್ಟೆ ಮಹೇಶ್, ಬಸವಣ್ಣಿ ಇದ್ದರು.

> “ ವಾಸನ ಗ್ರಾಮದಲ್ಲಿ ಸ್ಮಶಾನಕ್ಕೆಂದು ಒಂದು ಎಕರೆ ಜಾಗ ಮೀಸಲಿಟ್ಟಿದೆ. ಆದರೆ ಬಲಾಢ್ಯರು ಅದನ್ನು ಒತ್ತುವರಿ ಮಾಡಿ ಕೃಷಿ ಮಾಡುತ್ತಿದ್ದಾರೆ. ಸ್ಮಶಾನವಿಲ್ಲದೆ ಆ ಗ್ರಾಮದಲ್ಲಿ ನಿಧನರಾದವರ ಅಂತ್ಯ ಸಂಸ್ಕಾರಕ್ಕೆ ತೊಂದರೆಯಾಗಿದೆ. ಸಂಬಂಧಿತರು ಸ್ಮಶಾನದ ಒತ್ತುವರಿ ತೆರವುಗೊಳಿಸಬೇಕು.
>
> **- ಪಿ.ಜೆ. ಮಹಾಂತೇಶ್,**
> ಸಂಚಾಲಕರು, ತಾಲ್ಲೂಕು ದಸಂಸ

## ಜಿಎಂಐಟಿಯಲ್ಲಿಂದು ಉತ್ಪಾದನಾ ಮೇಳ

ದಾವಣಗೆರೆ, ಜ.9- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ವತಿಯಿಂದ ನಾಳೆ ದಿನಾಂಕ 10 ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಮೆಕ್ಯಾನಿಕಲ್ ಸೆಮಿನಾರ್ ಹಾಲ್‌ನಲ್ಲಿ ಉತ್ಪಾದನಾ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ವಿಭಾಗದ ಮುಖ್ಯಸ್ಥ ಡಾ. ಕೆ.ಕೆ. ಪ್ರಕಾಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮೇಳವು ಕೇವಲ ಉತ್ಪನ್ನಗಳ ಪ್ರದರ್ಶನವಾಗಿದ್ದು, ಇಲ್ಲಿ ವಿದ್ಯಾರ್ಥಿಗಳು ಹೊಸ ಉತ್ಪನ್ನಗಳ ತಯಾರಿಕೆಗೆ ಬೇಕಾಗುವ ಕೌಶಲ್ಯವನ್ನು ವಿವರಿಸಲಾಗುತ್ತದೆ. ಜೈವಿಕ ತಂತ್ರಜ್ಞಾನದ ಹೊಸ ತಾಂತ್ರಿಕತೆಯಿಂದ ಮನುಕುಲಕ್ಕೆ ಉಪಯೋಗವಾಗುವುದಕ್ಕೆ ಒತ್ತು ನೀಡುತ್ತದೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳು ಸಿದ್ಧಪಡಿಸಿದ 43 ಉತ್ಪನ್ನಗಳನ್ನು ಹೀಲಿಂಗ್, ಸಾವಯುವ ಮತ್ತು ಪರಿಸರ ಸ್ನೇಹಿ, ರೋಗ ನಿರೋಧಕ, ಶಕ್ತಿ ವರ್ಧಕ ಹಾಗೂ ಖಾದ್ಯ ಉತ್ಪನ್ನಗಳನ್ನಾಗಿ ನಾಲ್ಕು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮೇಳದ ಆಯೋಜಕರಾದ ದೀಪ್ತಿ ಪಲ್ಲೇದ್, ಪ್ಲೇಸ್‌ಮೆಂಟ್ ಅಧಿಕಾರಿ ತೇಜಸ್ವಿ ಕಟ್ಟಿಮನಿ ಉಪಸ್ಥಿತರಿದ್ದರು.

# ಕಾಂಗ್ರೆಸ್‌ನದ್ದು ರಾಜಕೀಯ ಪಾದಯಾತ್ರೆ: ಬೊಮ್ಮಾಯಿ

### ಕೋವಿಡ್ ಉಲ್ಲಂಘನೆಗಾಗಿ ಕಾನೂನು ಕ್ರಮ

ಬೆಂಗಳೂರು, ಜ. 9 – ಮೇಕೆದಾಟು ಯೋಜನೆ ಜಾರಿಗೆ ತರುವಂತೆ ಒತ್ತಾಯಿಸಿ ಪಾದಯಾತ್ರೆ ಆರಂಭಿಸಿರುವ ಕಾಂಗ್ರೆಸ್ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೊರೊನಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುವ ಕಾಂಗ್ರೆಸ್ ನಾಯಕರ ವಿರುದ್ಧ ಕಾನೂನು ರೀತ್ಯ ಕ್ರಮ ತೆಗೆದುಕೊಳ್ಳಲಾಗುವುದು ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡು ತ್ತಿದ್ದ ಅವರು, ಮೇಕೆದಾಟು ವಿಷಯದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ. ಬೇಜವಾಬ್ದಾರಿ ಪ್ರತಿಪಕ್ಷವಾಗಿ ವರ್ತಿಸುತ್ತಿದೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದವರಿಗೆ ತಾವೇನು ಮಾಡುತ್ತಿದ್ದೇವೆ, ಇದರಿಂದ ಏನು ಪರಿಣಾಮವಾಗುತ್ತದೆ ಎಂಬುದು ಗೊತ್ತಿದೆ. ಆದರೆ, ಅವರಿಗೆ ರಾಜಕೀಯವೇ ಮುಖ್ಯವಾಗಿದೆ ಎಂದು ಬೊಮ್ಮಾಯಿ ಹೇಳಿದ್ದಾರೆ. ಯೋಜನೆಗೆ ಸಂಬಂಧಿಸಿದಂತೆ ಪ್ರಕರಣಗಳು ಬಾಕಿ ಇವೆ. ಈ ಹಿಂದೆ ಅಧಿಕಾರದಲ್ಲಿದ್ದ ಹಾಗೂ ಈಗ ಜವಾಬ್ದಾರಿಯುತ ಪ್ರತಿಪಕ್ಷವಾಗಿರುವ ಕಾಂಗ್ರೆಸ್‌ಗೆ ವ್ಯವಸ್ಥೆಯ ಬಗ್ಗೆ ಪೂರ್ಣ ತಿಳುವಳಿಕೆ ಇದೆ. ಕಾನೂನು, ಅಂತರಾಜ್ಯ ಜಲ ವಿವಾದ, ನ್ಯಾಯಾಲಯ ಹಾಗೂ ಟ್ರಿಬ್ಯೂನಲ್‌ಗಳ ಆದೇಶಗಳಿವೆ. ಹೀಗಿರುವಾಗ ಪಾದಯಾತ್ರೆಗೆ ತೆರಳಬಾರದಿತ್ತು. ಆದರೆ, ಅವರಿಗೆ ರಾಜಕೀಯವೇ ಮುಖ್ಯವಾಗಿರುವಂತಿದೆ. ಜನರೇ ಈ ಬಗ್ಗೆ ನಿರ್ಧರಿಸಲಿದ್ದಾರೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಕೊರೊನಾ ಮಾರ್ಗಸೂಚಿಗಳ ಉಲ್ಲಂಘನೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿರುವ ಬೊಮ್ಮಾಯಿ, ಅವರಿಗೆ ನೋಟಿಸ್‌ಗಳನ್ನು ಕಳಿಸಲಾಗಿದೆ. ಅಧಿಕಾರಿಗಳು ವೈಯಕ್ತಿಕವಾಗಿ ಪಾದಯಾತ್ರೆ ಮಾಡದಂತೆ ಸಲಹೆ ನೀಡಿದ್ದಾರೆ. ಆದರೆ, ಅವರು ಉಡಾಫೆಯಿಂದ ಮುಂದುವರೆದಿದ್ದಾರೆ. ಕಾನೂನು ರೀತಿ ನಾವು ಕ್ರಮ ತೆಗೆದುಕೊಳ್ಳಲಿದ್ದೇವೆ ಎಂದಿದ್ದಾರೆ.

ಅಧಿಕಾರದಲ್ಲಿದ್ದಾಗ ನಾವು ಕೆಲಸ ಮಾಡಲಿಲ್ಲ ಎಂಬ ಅಪರಾಧ ಮನೋಭಾವ ಕಾಂಗ್ರೆಸ್‌ಗೆ ಕಾಡುತ್ತಿದೆ. ಹೀಗಾಗಿ ಜನರನ್ನು ಮರುಳು ಮಾಡಲು ಶುದ್ಧ ರಾಜಕೀಯ ಪ್ರೇರಿತ ಪಾದಯಾತ್ರೆ ಮಾಡುತ್ತಿದ್ದಾರೆ ಎಂದವರು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಹಿಂದೆ ಕೃಷ್ಣಾ ನದಿ ನೀರಾವರಿ ಕುರಿತು ಪಾದಯಾತ್ರೆ ಮಾಡಿದ್ದರು. ಪ್ರತಿ ವರ್ಷ ಕೃಷ್ಣಾ ಕೊಳ್ಳದ ನೀರಾವರಿ ಯೋಜನೆಗಳಿಗೆ 10 ಸಾವಿರ ಕೋಟಿ ರೂ. ಕೊಡುತ್ತೇವೆ ಎಂದಿದ್ದರು. ಆದರೆ, ಐದು ವರ್ಷ ಆಡಳಿತ ನಡೆಸಿದರೂ 7 ಸಾವಿರ ಕೋಟಿ ರೂ. ಸಹ ಕೊಡಲಿಲ್ಲ ಎಂದವರು ಟೀಕಿಸಿದರು.

## ರಾಣೇಬೆನ್ನೂರಿನಲ್ಲಿ ಕಣ್ಣು ಪರೀಕ್ಷಾ ಶಿಬಿರ

ರಾಣೇಬೆನ್ನೂರು, ಜ.9- ಇಲ್ಲಿನ ರೋಟರಿ, ಶಿವಮೊಗ್ಗ ಶಂಕರ ಆಸ್ಪತ್ರೆ ಹಾಗೂ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ ತಾಲ್ಲೂಕಿನ ಮಾಕನೂರ ಗ್ರಾಮದಲ್ಲಿ ಏರ್ಪಡಿಸಿದ್ದ ನೇತ್ರ ಪರೀಕ್ಷಾ ಶಿಬಿರದಲ್ಲಿ 250 ಜನರ ಕಣ್ಣು ಪರೀಕ್ಷೆ ಮಾಡಲಾಯಿತು.

ರೋಟರಿ ಅಧ್ಯಕ್ಷ ಡಾ. ಎಸ್.ಎಂ. ಚಳಗೇರಿ, ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಡಾ. ಬಸವರಾಜ ಕೇಲಗಾರ, ಕೆ.ವಿ. ಶ್ರೀನಿವಾಸ್, ವೀರೇಶ್ ಹನಗೋಡಿಮಠ, ಡಾ. ಚಂದ್ರಶೇಖರ್ ಕೇಲಗಾರ, ಡಾ. ಬೆಳವಗಿ, ಡಾ. ಮುಡದೇವನ್ನವರ, ಡಾ. ರವಿ ಕುಲ್ಕರ್ಣಿ ಭಾಗವಹಿಸಿದ್ದರು.

## ವರ್ಷದ ವ್ಯಕ್ತಿ ಪ್ರಶಸ್ತಿ ಪುರಸ್ಕೃತರಾದ ಜಸ್ಟಿನ್ ಡಿಸೋಜಾಗೆ ಜಿಲ್ಲಾ ಕಾಂಗ್ರೆಸ್‌ನಿಂದ ಸನ್ಮಾನ



ದಾವಣಗೆರೆ, ಜ.9 - ಜಿಲ್ಲಾ ಕಾಂಗ್ರೆಸ್ ವತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿ, ವರ್ಷದ ವ್ಯಕ್ತಿ ಪ್ರಶಸ್ತಿ ಪಡೆದಿರುವ ಜಸ್ಟಿನ್ ಡಿಸೋಜಾ ಅವರನ್ನು ಸಿದ್ದಗಂಗಾ ವಿದ್ಯಾ ಸಂಸ್ಥೆ ಆವರಣದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಶಿಕ್ಷಣ ಕ್ಷೇತ್ರದಲ್ಲಿ ಸಿದ್ದಗಂಗಾ ಸಂಸ್ಥೆಯ ಕೊಡುಗೆ ಅಪಾರವಾಗಿದ್ದು ಬಡವರು, ಶ್ರೀಮಂತರು ಎಲ್ಲರೂ ಈ ವಿದ್ಯಾಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡುವಂತಹ ಶುಲ್ಕವಿದ್ದು, ಶಿಕ್ಷಣವು ಸಹ ಅತ್ಯುತ್ತಮ ದರ್ಜೆಯಲ್ಲಿ ದೊರೆಯುತ್ತಿದೆ ಎಂದು ಎಂದು ಶ್ಲಾಘಿಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಜಸ್ಟಿನ್ ಡಿಸೋಜಾ ಅವರು ಸಿದ್ದಗಂಗಾ ವಿದ್ಯಾಸಂಸ್ಥೆಯ ಏಳಿಗೆಗೆ ಡಾ. ಶಾಮನೂರು ಶಿವಶಂಕರಪ್ಪ, ಶಾಮನೂರು ಮಲ್ಲಿಕಾರ್ಜುನ್ ಅವರ ಕೊಡುಗೆ ಅಪಾರವಾಗಿದ್ದು ತಾವು ಹಾಗೂ ನಮ್ಮ ಸಂಸ್ಥೆ ಕೊನೆಯವರೆಗೂ ಅವರ ಸಹಾಯವನ್ನು ಮರೆಯುವುದಿಲ್ಲ ಎಂದು ಕೃತಜ್ಞತೆ ಸಲ್ಲಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಶಿವಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್. ಮಲ್ಲಿಕಾರ್ಜುನ್, ವಿಪಕ್ಷ ನಾಯಕ ನಾಗರಾಜ್ ಮಾತನಾಡಿದರು.

ಪಾಲಿಕೆ ಸದಸ್ಯರಾದ ಜೆ.ಎನ್. ಶ್ರೀನಿವಾಸ್, ಶ್ರೀಮತಿ ಶ್ವೇತಾ ಜೆ.ಎನ್. ಶ್ರೀನಿವಾಸ್, ಸಾಮಾಜಿಕ ಜಾಲತಾಣದ ಜಿಲ್ಲಾಧ್ಯಕ್ಷ ಕೆ.ಎಲ್.ಹರೀಶ್ ಬಸಾಪುರ, ದಾಕ್ಷಾಯಣಮ್ಮ, ರಾಜೇಶ್ವರಿ, ಅಬ್ದುಲ್ ಜಬ್ಬಾರ್, ಯುವರಾಜ್, ಸಿದ್ದೇಶ್, ಪ್ರವೀಣ್, ಶಮಿ ದೇವರಹಟ್ಟಿ, ಅಲೆಕ್ಸಾಂಡರ್ ಜಾನ್ ಇನ್ನು ಮುಂತಾದವರು ಉಪಸ್ಥಿತರಿದ್ದರು.

## ಚುನಾವಣಾ ರಾಜ್ಯಗಳ ಲಸಿಕೆ ಪ್ರಮಾಣ ಪತ್ರದಲ್ಲಿ ಮೋದಿ ಚಿತ್ರವಿಲ್ಲ

ನವದೆಹಲಿ, ಜ. 9 – ವಿಧಾನಸಭಾ ಚುನಾವಣೆ ಎದುರಿಸಲಿರುವ ಐದು ರಾಜ್ಯಗಳಲ್ಲಿ ನೀತಿ ಸಂಹಿತೆ ಜಾರಿಗೆ ಬಂದಿರುವ ಹಿನ್ನೆಲೆಯಲ್ಲಿ, ಈ ರಾಜ್ಯಗಳಲ್ಲಿ ನೀಡಲಾಗುವ ಲಸಿಕೆ ಪ್ರಮಾಣ ಪತ್ರದ ಮೇಲೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಿತ್ರ ಇರುವುದಿಲ್ಲ.

ಕೇಂದ್ರ ಆರೋಗ್ಯ ಸಚಿವಾಲಯ ಈ ಬಗ್ಗೆ ಕ್ರಮ ತೆಗೆದುಕೊಂಡಿದೆ. ಶನಿವಾರ ರಾತ್ರಿಯಿಂದಲೇ ಈ ಕ್ರಮ ಜಾರಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ. ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಮಣಿಪುರ ಹಾಗೂ ಗೋವಾ ವಿಧಾನಸಭೆಗಳಿಗೆ ಫೆಬ್ರವರಿ 10ರಿಂದ ಚುನಾವಣೆ ನಡೆಯಲಿದೆ.

## ಜಗಳೂರು ತಾಲ್ಲೂಕಿನಲ್ಲಿ ಇಂದಿನಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಜಗಳೂರು ಉಪ ವಿಭಾಗ ವ್ಯಾಪ್ತಿಯ 66/11ಕೆ.ವಿ. ಎಂ.ಯು.ಎಸ್.ಎಸ್‌ನಿಂದ ಅಶ್ವತ್‌ರೆಡ್ಡಿ ನಗರದವರೆಗೆ ಎಸ್.ಡಿ.ಪಿ ಹೆಚ್.ಟಿ ಎ.ಬಿ ಕೇಬಲ್ ಕಾಮಗಾರಿ ನಿರ್ವಹಿಸಬೇಕಾಗಿರುವುದರಿಂದ ಜಗಳೂರು ವಿ.ವಿ. ಕೇಂದ್ರ ವ್ಯಾಪ್ತಿಯಲ್ಲಿ ಬರುವ ಜೆಎಫ್-13 ರಸ್ತೆಮಾಕುಂಟೆ, ಜೆಎಫ್-14 ಅರಿಶಿನಗುಂಡಿ ಹಾಗೂ ಜೆಎಫ್-15 ಜ್ಯೋತಿಪುರ ನಿರಂತರ ಜ್ಯೋತಿ ಫೀಡರ್‌ಗಳಲ್ಲಿ ಬರುವ ಎಲ್ಲಾ ಗ್ರಾಮಗಳಿಗೆ ಇಂದಿನಿಂದ ಇದೇ ದಿನಾಂಕ 22 ರವರೆಗೆ ಮಧ್ಯಾಹ್ನ 12 ರಿಂದ ಸಂಜೆ 6ರ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಎಫ್-05 ಜಮ್ಮಾಪುರ ಎಫ್-06 ಅಣಬೂರು ಎಫ್-07 ಹನುಮಂತಾಪುರ ಮತ್ತು ಎಫ್-08 ಕಸವನಹಳ್ಳಿ ಫೀಡರ್‌ಗಳ ಎಲ್ಲಾ ನೀರಾವರಿ ಪಂಪ್‌ಸೆಟ್ಟು ಮಾರ್ಗಗಳಿಗೆ ಬೆಳಗ್ಗೆ 6 ರಿಂದ ಮಧ್ಯಾಹ್ನ 12ರ ವರೆಗೆ ವಿದ್ಯುತ್ ಸರಬರಾಜು ಇರುತ್ತದೆ.

## ಧರ್ಮಸ್ಥಳದ ಅನ್ನ ದಾಸೋಹಕ್ಕೆ ನಗರದ ದಾನಿಗಳಿಂದ 330 ಕ್ವಿಂಟಾಲ್ ಅಕ್ಕಿ ಸಮರ್ಪಣೆ



ದಾವಣಗೆರೆ,ಜ.9- ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ಪ್ರತಿನಿತ್ಯ ನಡೆಯುವ ಅನ್ನ ದಾಸೋಹಕ್ಕೆ ನಗರದ ಅಣಬೇರು ಮಂಜಣ್ಣ ಮತ್ತು ಕುಟುಂಬದವರು ಹಾಗೂ ಅವರ ಸ್ನೇಹಿತರೊಡಗೂಡಿ ಒಟ್ಟು 330 ಕ್ವಿಂಟಾಲ್ ಅಕ್ಕಿಯನ್ನು ದಾನ ಮಾಡಲಾಗಿದೆ.

ಅಕ್ಕಿ ಲೋಡಾದ ಲಾರಿಗೆ ಇಂದು ಸಂಜೆ ಕೆ.ಬಿ. ಬಡಾವಣೆಯಲ್ಲಿ ಪೂಜೆ ಸಲ್ಲಿಸುವುದರ ಮೂಲಕ ಧರ್ಮಸ್ಥಳಕ್ಕೆ ಕಳುಹಿಸಿಕೊಡಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ 22ನೇ ವರ್ಷದ ಅಕ್ಕಿ ಸಮರ್ಪಣೆ ಇದಾಗಿರುತ್ತದೆ ಎಂದು ಅಣಬೇರು ಮಂಜಣ್ಣ ತಿಳಿಸಿದ್ದಾರೆ.

ಅಣಬೇರು ದಿ. ಶ್ರೀಮತಿ ದ್ಯಾಮಮ್ಮ ಮತ್ತು ದಿ. ದೇವೇಂದ್ರಪ್ಪ ದಂಪತಿ ಪುತ್ರ ಮಂಜಣ್ಣ, ಅವರ ಪತ್ನಿ ಶ್ರೀಮತಿ ಲತಾ ಮತ್ತು ಕುಟುಂಬ ವರ್ಗದವರು ಸೇರಿದಂತೆ, ಸ್ನೇಹಿತರು, ಬಂಧುಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ರಾಮೇಶ್ವರ : ಪೌಷ್ಟಿಕ ಕೈತೋಟದ ತರಬೇತಿ



ನ್ಯಾಮತಿ, ಜ.9- ದಾವಣಗೆರೆಯ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ನ್ಯಾಮತಿ ತಾಲ್ಲೂಕಿನ ರಾಮೇಶ್ವರ ಗ್ರಾಮದಲ್ಲಿ ಪೌಷ್ಟಿಕ ಕೈತೋಟದ ಬಗ್ಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೇಂದ್ರದ ತೋಟಗಾರಿಕೆ ವಿಜ್ಞಾನಿಗಳಾದ ಎಂ.ಜಿ. ಬಸವನಗೌಡ, ಡಾ. ಸುಪ್ರಿಯಾ ಪಿ. ಪಾಟೀಲ, ಡಾ. ದೇವರಾಜ ಟಿ.ಎನ್. ಅವರುಗಳು ಮಾತನಾಡಿ ಪೌಷ್ಟಿಕ ಕೈತೋಟದ ಮಹತ್ವ ತಿಳಿಸಿದರು. ಕಾರ್ಯಕ್ರಮದಲ್ಲಿ 30 ಜನ ರೈತ ಮಹಿಳೆಯರಿಗೆ ಪೌಷ್ಟಿಕ ಕೈತೋಟಕ್ಕೆ ಬೇಕಾಗಿರುವ ಬೀಜಗಳು ಮತ್ತು ಬೇವಿನ ಎಣ್ಣೆಯನ್ನು ವಿತರಿಸಲಾಯಿತು. ಪ್ರಗತಿಪರ ರೈತ ರಾಕೇಶ್ ಹಾಗೂ ರೈತ ಮಹಿಳೆಯರಾದ ಯಶೋಧಮ್ಮ, ಪಾರ್ವತಮ್ಮ ಮತ್ತು ಇತರರು ಭಾಗವಹಿಸಿದ್ದರು.

## ಬಸಾಪುರದ ಸರ್ಕಾರಿ ಶಾಲೆಯಲ್ಲಿ ತರಬೇತಿ ಕಾರ್ಯಾಗಾರ



ದಾವಣಗೆರೆ,ಜ.9- ಇಲ್ಲಿನ ಬಸಾಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಹಾಗೂ ಪೋಷಕರ ತರಬೇತಿ ಕಾರ್ಯಾಗಾರ ನಡೆಯಿತು.

ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸಿದ್ದಾರ್ಥ್ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಉಪಾಧ್ಯಕ್ಷರಾದ ನಾಗವೇಣಿ, ಕೆ.ಎಲ್. ಹರೀಶ್ ಬಸಾಪುರ ಮಾತನಾಡಿದರು. ಶಿಕ್ಷಕರಾದ ಸ್ಮಿತಾ ಪ್ರಾರ್ಥನೆ ಮಾಡಿದರೆ, ಪ್ರಭಾರಿ ಮುಖ್ಯಶಿಕ್ಷಕ ಸಂತೋಷ್ ಕುಮಾರ್ ಸ್ವಾಗತಿಸಿದರು. ಹಿರಿಯ ಶಿಕ್ಷಕರಾದ ಶಶಿಕಲಾ ನಿರೂಪಿಸಿದರು. ಶಿಕ್ಷಕ ರವಿ ವಂದಿಸಿದರು.

ಸದಸ್ಯರು ಹಾಗೂ ಪೋಷಕರಿಗೆ ಮ್ಯೂಸಿಕಲ್ ಚೇರ್ ಆಟ ಹಾಗು ಇನ್ನಿತರೆ ಮನೋರಂಜನಾ ಕಾರ್ಯಕ್ರಮಗಳನ್ನು ದೈಹಿಕ ಶಿಕ್ಷಕರಾದ ಪ್ರೇಮಕುಮಾರಿ ಅವರು ನಡೆಸಿಕೊಟ್ಟರು.

ಶಾಲೆಯ ಶಿಕ್ಷಕಿಯರಾದ ನಿಂಗಮ್ಮ, ಸೌಮ್ಯ, ಸದಸ್ಯರುಗಳಾದ ಚಂದ್ರಶೇಖರ್, ಮಹಾಂತೇಶ್, ರಮೇಶ್, ಗುರುಸಿದ್ದಯ್ಯ, ಹಾಲೇಶ್, ದೇವೀರಮ್ಮ, ಆಶಾ, ಸುನೀತ, ಮಂಜುಳಾ, ಸುಮಿತ್ರ, ಶಕುಂತಲಾ, ಪುಷ್ಪ, ಭವ್ಯ, ಪೋಷಕರಾದ ಶೃತಿ, ರೇಖಾ, ಮಮತಾ, ಕರಿಬಸಪ್ಪ, ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

## ಸರ್ ಎಂ.ವಿ.ಕಾಲೇಜಿನಲ್ಲಿ ಲಸಿಕೆ



ದಾವಣಗೆರೆ, ಜ.9- ನಗರದ ಸರ್ ಎಂ.ವಿ.ಕಾಲೇಜಿನಲ್ಲಿ ಕೋವಿಡ್ ಲಸಿಕೆಯನ್ನು ಕಾಲೇಜಿನ ಸುಮಾರು 2 ಸಾವಿರ ವಿದ್ಯಾರ್ಥಿಗಳಿಗೆ ನೀಡಲಾಗಿದೆ ಎಂದು ಕಾಲೇಜಿನ ಕಾರ್ಯದರ್ಶಿ ಎಸ್.ಜೆ.ಶ್ರೀಧರ್ ತಿಳಿಸಿದ್ದಾರೆ.

# ಸ್ಥಳೀಯ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಅಧ್ಯಯನ ನಡೆಸಬೇಕು

### ವಿದ್ಯಾರ್ಥಿಗಳಿಗೆ ಡಾ. ಆರ್. ಶಶಿಧರ್ ಕಿವಿಮಾತು



ದಾವಣಗೆರೆ, ಜ. 9- ವಿದ್ಯಾರ್ಥಿಗಳು ರೂಪಿಸುವ ಅಧ್ಯಯನ ವರದಿಗಳು ಸ್ಥಳೀಯ ಸಮಸ್ಯೆಗಳ ಕುರಿತದ್ದಾಗಿರಬೇಕು ಹಾಗೂ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗುವಂತಿರಬೇಕು ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ಮ್ಯಾನೇಜ್‌ಮೆಂಟ್ ವಿಭಾಗದ ಮುಖ್ಯಸ್ಥರಾದ ಡಾ. ಆರ್. ಶಶಿಧರ್ ಹೇಳಿದ್ದಾರೆ.

ನಗರದ ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ - ಟೆಕ್ ಎಜುಕೇಷನ್ ವತಿಯಿಂದ ಮೊನ್ನೆ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಕಾರ್ಯಾಗಾರವಾದ 'ಪ್ರಜ್ಞಾ' ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ಸಂದರ್ಭದಲ್ಲಿ ವಾಣಿಜ್ಯ ನಿರ್ವಹಣೆ ಹಾಗೂ ಮಾಹಿತಿ ತಂತ್ರಜ್ಞಾನಗಳ ಮೇಲೆ ಆಗಿರುವ ಪರಿಣಾಮಗಳ ಕುರಿತು ವಿದ್ಯಾರ್ಥಿಗಳು ಅಧ್ಯಯನ ವರದಿಗಳನ್ನು ಕಾರ್ಯಾಗಾರದಲ್ಲಿ ಮಂಡಿಸಿದ್ದರು.

ಕೊರೊನಾ ಸಂದರ್ಭದಲ್ಲಿ ಸಾಮಾಜಿಕವಾಗಿ ಹಾಗೂ ಸ್ಥಳೀಯವಾಗಿ ಸಾಕಷ್ಟು ಸಮಸ್ಯೆಗಳು ಉದ್ಭವಿಸಿವೆ. ದಾವಣಗೆರೆ ಸಣ್ಣ ವಹಿವಾಟುದಾರರು ಹೆಚ್ಚಾಗಿರುವ ನಗರವಾಗಿದೆ. ಹೀಗಾಗಿ ಇಲ್ಲಿ ಕೊರೊನಾ ಪರಿಣಾಮ ಇನ್ನೂ ಹೆಚ್ಚಾಗಿದೆ. ಈ ಬಗ್ಗೆ ಅಧ್ಯಯನ ನಡೆಸಿ, ತಂತ್ರಜ್ಞಾನದ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಒತ್ತು ನೀಡಬೇಕಿದೆ ಎಂದು ಶಶಿಧರ್ ಹೇಳಿದರು.

ಲಾಕ್‌ಡೌನ್ ಅವಧಿಯಲ್ಲಿ ಇ-ಕಾಮರ್ಸ್ ಬೆಳೆದಿದೆ. ಅದರ ಮೌಲ್ಯ 8.3 ಶತಕೋಟಿ ಡಾಲರ್ ಆಗಿದ್ದು, ಪ್ರತಿ ವರ್ಷ ಶೇ.27ರಷ್ಟು ಬೆಳವಣಿಗೆ ಹೊಂದಿದೆ. ಫ್ಯಾಷನ್, ಬಟ್ಟೆ ಹಾಗೂ ದಿನಸಿ ವಸ್ತುಗಳು ಆನ್‌ಲೈನ್‌ನಲ್ಲಿ ಅತಿ ಹೆಚ್ಚು ಬೇಡಿಕೆ ಪಡೆಯುತ್ತಿವೆ ಎಂದವರು ಹೇಳಿದರು.

ಡಿಜಿಟಲ್ ಮಾರ್ಕೆಟಿಂಗ್ ವಲಯದ ಮೌಲ್ಯ160 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಬ್ಲಾಕ್‌ಚೈನ್ ತಂತ್ರಜ್ಞಾನ ಈಗ ಶೈಕ್ಷಣಿಕ ವಲಯಕ್ಕೆ ಕಾಲಿಡುತ್ತಿದೆ. ನವೋದ್ಯಮಗಳು ವೇಗವಾಗಿ ಬೆಳೆಯುತ್ತಿವೆ. ಈ ಎಲ್ಲ ವಿಷಯಗಳ ಬಗ್ಗೆ ವಿದ್ಯಾರ್ಥಿಗಳು ಗಮನ ಹರಿಸಬೇಕು ಎಂದರು.

ದಾವಣಗೆರೆ ವಿ.ವಿ. ಮ್ಯಾನೇಜ್‌ಮೆಂಟ್ ವಿಭಾಗದ ಉಪನ್ಯಾಸಕ ಚಂದ್ರಹಾಸ್ ಮಾತನಾಡಿ, ಗೆದ್ದವರು ಹಾಗೂ ಸೋತವರು ಇತಿಹಾಸ ರಚಿಸುತ್ತಾರೆಯೇ ವಿನಃ ಸುಮ್ಮನಿರುವವರು ಅಲ್ಲ. ಹೀಗಾಗಿ ವಿದ್ಯಾರ್ಥಿಗಳು ತಟಸ್ಥರಾಗದೇ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗಿಯಾಗಬೇಕು ಎಂದು ಕಿವಿಮಾತು ಹೇಳಿದರು.

ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈ ಟೆಕ್ ಎಜುಕೇಷನ್ ಪ್ರಾಂಶುಪಾಲ ಡಾ. ಬಿ. ವೀರಪ್ಪ ಅಧ್ಯಕ್ಷತೆ ವಹಿಸಿದ್ದರು. ಬಾಪೂಜಿ ಬಿ - ಸ್ಕೂಲ್ಸ್ ನಿರ್ದೇಶಕ ಡಾ. ಸ್ವಾಮಿ ತ್ರಿಭುವಾನಂದ ಉಪಸ್ಥಿತರಿದ್ದರು.

## ತರಳಬಾಳು ವಸತಿ ಶಾಲೆಯಲ್ಲಿ ಯೋಗ



ದಾವಣಗೆರೆ, ಜ.9- ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕರ್ನಾಟಕ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಆಶ್ರಯದಲ್ಲಿ ಯೋಗ ಪದಕ ಪಡೆಯುವ ನಿಟ್ಟಿನಲ್ಲಿ ನಗರದ ಶ್ರೀ ತರಳಬಾಳು ವಸತಿ ಶಾಲೆಯಲ್ಲಿ ಮೊನ್ನೆ ಯೋಗ ಶಿಬಿರವನ್ನು ನಡೆಸಲಾಯಿತು. ಇದರಲ್ಲಿ ಶ್ರೀ ತರಳಬಾಳು ಸ್ಕೌಟ್ಸ್ ಮತ್ತು ಗೈಡ್ಸ್, ಮಾಗನೂರು ಬಸಪ್ಪ ಸ್ಕೌಟ್ಸ್ - ಗೈಡ್ಸ್, ಬಾಪೂಜಿ ಓಪನ್ ಸ್ಕೌಟ್ಸ್ ಟ್ರೂಪ್, ಮದರ್ ತೆರೇಸಾ ಓಪನ್ ಗೈಡ್ ಕಂಪನಿಯ ಮಕ್ಕಳು ಭಾಗವಹಿಸಿದ್ದರು.

ಶಿಬಿರದಲ್ಲಿ ಪ್ರಾಣಾಯಾಮ, ಸೂರ್ಯ ನಮಸ್ಕಾರದ ಬಗ್ಗೆ ಮಾಹಿತಿ ಪಡೆದು, ಪ್ರಯೋಗಾತ್ಮಕವಾಗಿ ಮಾಡಿದರು. ಯೋಗವನ್ನು ವೀಕ್ಷಿಸಲು ಶ್ರೀ ತರಳಬಾಳು ಸೆಂಟ್ರಲ್ ಸ್ಕೂಲ್ಸ್‌ನ ಪ್ರಿನ್ಸಿಪಾಲ್ ಕೆ.ಎಸ್. ಸೋಮಶೇಖರ್, ಸ್ಕೌಟ್ ಮಾಸ್ಟರ್ ಟಿ.ಎಂ. ರವೀಂದ್ರ ಸ್ವಾಮಿ ಹಾಗೂ ಶಶಿ ಅವರುಗಳು ಭಾಗವಹಿಸಿ, ಮಕ್ಕಳಿಗೆ ಯೋಗದ ಉಪಯೋಗಗಳನ್ನು ಹೇಳಿಕೊಟ್ಟರು.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte